PRGI : KNKAN/26/A0629

ವಿಜಯನಗರ-ಬಳ್ಳಾರಿ-ಕೊಪ್ಪಳ-ರಾಯಚೂರು-ಗದಗ-ಯಾದಗಿರಿ-ದಾವಣಗೆರೆ-ಹಾವೇರಿ-ಕಲಬುರ್ಗಿ- ಜಿಲ್ಲೆಗಳಲ್ಲಿ ಪ್ರಸಾರಿತ

NO.PMG/KA/NK/BLY/04/2026-2028

# ಹೊಸಪೇಟೆ ಧ್ವನಿ

HOSAPETE DHWANI

Kannada Daily morning news paper

ಸ್ವಾಸ್ಥ್ಯ ಸಮಾಜಕ್ಕಾಗಿ ನಮ್ಮ ಧ್ವನಿ

ಸಂಪಾದಕರು ಕೆ.ಪ್ರಕಾಶ ಕಾಕುಬಾಳು

Editor : K. prakash Kakubalu ಮೊ. 9342568684 VIJAYANAGARA ಕನ್ನಡ ದಿನ ಪತ್ರಿಕೆ

ಸಂಪುಟ : 01 ಸಂಚಿಕೆ : 188 ಮಂಗಳವಾರ ದಿನಾಂಕ : 12-10-2026 ಪುಟ-4 ಬೆಲೆ : 2 ರೂ. E mail: hosapetedhwani32026@gmail.com

Volume 01 Issue : 188 Tuesday Date: 12-10-2026 Page-4 Rs : 2 ರೂ. E mail: hosapetedhwani32026@gmail.com

ಇಂದು ನಮ್ಮ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ ಸರ್ವಾಧಿಕಾರ, ಭ್ರಷ್ಟಾಚಾರ ಇದೆ. ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡಿದ್ದಾರೆ. ಮತಗಳನ್ನು ತೆಗೆದುಹಾಕುತ್ತಿದ್ದಾರೆ. ಇಂತಹ ಪರಿಸ್ಥಿತಿನಲ್ಲಿ ನಾವು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ.

–ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ



## ಅಧಿಕಾರ ಅವಧಿ ಮುಗಿದು ಬರೋಬ್ಬರಿ 5 ವರ್ಷ 6 ತಿಂಗಳ ನಂತರ ಜಿಪಂ ಮತ್ತು ತಾಪಂ ಕ್ಷೇತ್ರಗಳಿಗೆ ಮೀಸಲು ಪ್ರಕಟ

## ನೂತನ ವಿಜಯನಗರ ಜಿಲ್ಲೆಗೆ ಇದೇ ಮೊದಲ ಜಿಪಂ, ತಾಪಂ, ಚುನಾವಣೆ

# ಹಳ್ಳಿಗಳಲ್ಲಿ ಗರಿಗೆದರಿದ ರಾಜಕೀಯ

**ಹೊಸಪೇಟೆ ಧ್ವನಿ ವಿಶೇಷ ವರದಿ :**

ವಿಜಯನಗರ(ಹೊಸಪೇಟೆ): ನೂತನ ವಿಜಯನಗರ ಜಿಲ್ಲೆ 2021, ಅಕ್ಟೋಬರ್ 3 ರಂದು ಅಧಿಕೃತ ಜಿಲ್ಲೆಯಾಗಿ ಘೋಷಣೆಯಾಗಿದೆ. ಆದರೆ ಅದಕ್ಕೂ ಮುಂಚೆ ಅಂದರೆ 2021 ಏಪ್ರಿಲ್ ತಿಂಗಳಲ್ಲಿ ಜಿಪಂ ಮತ್ತು ತಾಪಂ ಜನಪ್ರತಿನಿಧಿಗಳ ಅಧಿಕಾರ ಅವಧಿ ಮುಗಿದಿದೆ. ಅಂದರೆ ಅಲ್ಲಿಗೆ ಬರೋಬ್ಬರಿ 5 ವರ್ಷ, 6 ತಿಂಗಳು ಆಗಿದೆ. ಜಿಲ್ಲೆ ಘೋಷಣೆಯಾಗುವ 6 ತಿಂಗಳ ಮುಂಚೆನೇ ಮುಗಿದಿದ್ದ ಜಿಪಂ ಮತ್ತು ತಾಪಂ ಅವಧಿ, ಸುಮಾರು 66 ತಿಂಗಳ ನಂತರ ಈಗ ಮೀಸಲು ಪ್ರಕಟವಾಗಿದ್ದರಿಂದ ಸಹಜವಾಗಿ ಹಳ್ಳಿಗಳಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ.

ಅಧಿಕಾರದಿಂದ ವಂಚಿತರಾಗಿದ್ದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಕಾರ್ಯಕರ್ತರಿಗೆ ಈಗಲಾದರೂ ಕಾರ್ಯಕರ್ತರಿಗೆ ಅಧಿಕಾರ ಸಿಗುವ ಕಾಲ ಸನಿಹ ಬಂತಲ್ಲಪ್ಪ ಎಂದು ನಿಟ್ಟುಸಿರು ಬಿಡುವಂತಾಗಿದೆ.

ಅಧಿಕಾರದಿಂದ ವಂಚಿತರಾಗಿದ್ದ ಎಲ್ಲಾ ಪಕ್ಷಗಳ ಕಾರ್ಯಕರ್ತರಿಗೆ ಕೆಲವರಿಗೆ ಹಮ್ಮಸ್ಸು ಇನ್ನು ಕೆಲವರಿಗೆ ಬೇಸರ ತರಿಸಿದೆ. ನಾವು ಅಂದುಕೊಂಡಂತೆ ನಮ್ಮ ಕ್ಷೇತ್ರಕ್ಕೆ ಮೀಸಲಾತಿ ಬರಲಿಲ್ಲವಲ್ಲ ಎಂದು ಕೆಲವರು ಗೊಣಗಿದರೆ, ಇನ್ನು ಕೆಲವರಿಗೆ ತಾವು ಅಂದುಕೊಂಡಂತೆ ಮೀಸಲಾತಿ ಬಂದಿದೆ. ಈ ಬಾರಿ ಒಂದು ಕೈ ನೋಡೇ ಬಿಡೋಣ ಎಂದು ಇನ್ನು ಕೆಲವರು ಹುಮ್ಮಸ್ಸಿನಿಂದ ಓಡಾಡುತ್ತಿದ್ದಾರೆ.

**ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಿಲ್ಲದೇ ಅಭಿವೃದ್ಧಿ ಕುಂಠಿತ :**

ಯಾವುದೇ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳು ಇಲ್ಲಾಂದ್ರೆ 15ನೇ ಹಣಕಾಸು ಸೇರಿದಂತೆ ಇತರೆ ಅನುದಾನಗಳು ಬಿಡುಗಡೆಯಾಗುವುದಿಲ್ಲ. ಇದರಿಂದ ಸಹಜವಾಗಿಯೇ ಅಭಿವೃದ್ಧಿ ಕುಂಠಿತವಾಗುತ್ತದೆ. ಸರ್ಕಾರದ ಶಾಸನಬದ್ಧ ಅನುದಾನದಲ್ಲಿ ಎಲ್ಲಾ ಅಭಿವೃದ್ಧಿ ಕೆಲಸ ನಡೆಯುವುದಿಲ್ಲ ಎಂಬುದು ಜನರ ಅಭಿಪ್ರಾಯವಾಗಿದೆ.

**ರಾಜಕೀಯ ಪಕ್ಷಗಳ ಮೇಲಾಟದಿಂದ ಮೀಸಲು ಗೊಂದಲ :**

ಮೊದಲಿಗೆ ಚುನಾವಣಾ ಆಯೋಗ ರೋಸ್ಟರ್ ಪದ್ಧತಿಯಲ್ಲಿ ಮೀಸಲು ಪಟ್ಟಿ ಪ್ರಕಟಿಸುವಾಗ ಯಾವುದೇ ಗೊಂದಲವಿರಲಿಲ್ಲ. ಯಾವಾಗ ಚುನಾವಣಾ ಆಯೋಗ ಮಾಡುತ್ತಿದ್ದ ಕೆಲಸವನ್ನು ರಾಜಕೀಯ ಪಕ್ಷಗಳು ತಮ್ಮ ಸುಪರ್ಧಿಗೆ ಪಡೆದಾಗ ಅಲ್ಲಿಂದ ಗೊಂದಲ ಶುರುವಾಗಿ, ಕೋರ್ಟ್‌ಗೆ ಹೋಗಿ, ತಿರುಗಿ ಯಥಾಸ್ಥಿತಿ ಕಾಯುವಂತೆ ಕೋರ್ಟ್ ಆದೇಶ ನೀಡಿದ್ದರಿಂದ ಅಲ್ಲಿಂದ ಇಲ್ಲಿಯವರೆಗೆ ಮೀಸಲು ಪಟ್ಟಿ ಪ್ರಕಟವಾಗದೇ ಇದ್ದುದರಿಂದ ಬರೋಬ್ಬರಿ 66 ತಿಂಗಳ ನಂತರ ಇದೀಗ ಮೀಸಲು ಪಟ್ಟಿ ಪ್ರಕಟಗೊಂಡಿದೆ.

**ಶಾಸಕರಿಗೆ ತಲೆನೋವಾದ ಜಿಪಂ, ತಾಪಂ,ಚುನಾವಣೆ**

ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆಗೆ 2028 ಕ್ಕೆ ಇನ್ನು ಒಂದುವರೆ ವರ್ಷವಿರುವಾಗ ಯಾವ ಶಾಸಕರಿಗೂ ಜಿಪಂ, ತಾಪಂ, ಚುನಾವಣೆ ನಡೆಸಲು ಇಷ್ಟವಿಲ್ಲ ಎಂದು ಹೇಳಲಾಗುತ್ತಿದೆ. ಮೂರ್ನಾಲ್ಕು ವರ್ಷ ಇನ್ನು ಅಧಿಕಾರ ಇದ್ದಿದ್ದರೆ ಶಾಸಕರಿಗೆ ಚುನಾವಣೆ ನಡೆಸಲು ಖುಷಿ ಇರುತ್ತೇನೋ. ಆದರೆ ಕೇವಲ ಒಂದುವರೆ ವರ್ಷ ಇದ್ದುದರಿಂದ ತಮ್ಮ ಅಭ್ಯರ್ಥಿಗಳನ್ನು ದುಡ್ಡು ಖರ್ಚು ಮಾಡಿ ಗೆಲ್ಲಿಸಿಕೊಂಡು ಬರಬೇಕಿರುವುದರಿಂದ ಸಹಜವಾಗಿಯೇ ಜಿಪಂ, ತಾಪಂ, ಚುನಾವಣೆ ಶಾಸಕರಿಗೆ ತಲೆನೋವು ತಂದಿದೆ ಎನ್ನುವ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ.

**ಗೊಂದಲದ ಗೂಡಾದ ಹೊಸಪೇಟೆಯ 2 ಜಿಪಂ ಕ್ಷೇತ್ರಗಳು :**

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ ಕ್ಷೇತ್ರ ಕಳೆದ ಬಾರಿಯೂ ಅನುಸೂಚಿತ ಜಾತಿ (ಮಹಿಳೆ) ಮೀಸಲು ಕ್ಷೇತ್ರವಾಗಿತ್ತು. ಈ ಬಾರಿಯೂ ಮತ್ತದೇ ಮೀಸಲು ಕ್ಷೇತ್ರವಾಗಿದೆ. ಮಾಜಿ ಸಚಿವರೊಬ್ಬರ ಪತ್ನಿಗೆ ಟಿಕೆಟ್ ಕೊಡಿಸಲು ಅದೇ ಅನುಸೂಚಿತ ಜಾತಿ (ಮಹಿಳೆ) ಮೀಸಲಾತಿ ತರಲಾಗಿದೆ ಎನ್ನುವ ಆರೋಪಗಳು ಕೇಳಿ ಬರುತ್ತಿವೆ. ಇದಕ್ಕಾಗಿ ಆಕ್ಷೇಪಣೆ ಸಲ್ಲಿಸಲು ಕೆಲವರು ಹೋಗಿದ್ದಾರೆ ಎನ್ನುವ ಮಾತುಗಳು ಸಹ ಕೇಳಿ ಬರುತ್ತಿವೆ.

ಇನ್ನು ಡಣಾಪುರ ಕ್ಷೇತ್ರವು ಸಹ ಕಳೆದ ಬಾರಿಯೂ ಅನುಸೂಚಿತ ಪಂಗಡ(ಮಹಿಳೆ)ಗೆ ಮೀಸಲಾಗಿತ್ತು. ಈ ಬಾರಿ ಮತ್ತದೇ ಮೀಸಲು ಪ್ರಕಟವಾಗಿದೆ. ಎರಡು ಬಾರಿ ಈ ಎರಡು ಕ್ಷೇತ್ರಗಳಲ್ಲಿ ಅದೇ ಮೀಸಲು ಪ್ರಕಟವಾಗಿದ್ದರಿಂದ ಗೊಂದಲ ಶುರುವಾಗಿ ಆಕ್ಷೇಪಣೆ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಲಾಗುತ್ತಿದೆ.

**ವಿಜಯನಗರ : 28 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮೀಸಲು ಪಟ್ಟಿ ಪ್ರಕಟ**

ಹೊಸಪೇಟೆ : ವಿಜಯನಗರ ಜಿಲ್ಲೆಯ 28 ಜಿಲ್ಲಾ ಪಂಚಾಯಿತಿ ಕೇತ್ರಗಳಿಗೆ ಕ್ಷೇತ್ರವಾರು ಮೀಸಲು ನಿಗಧಿಪಡಿಸಿ ರಾಜ್ಯ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು ಅ.19ರ ಸಂಜೆ 5 ಗಂಟೆವರೆಗೆ ಅವಕಾಶ ಕಲ್ಪಿಸಲಾಗಿದೆ.

**ಜಿಲ್ಲೆಯ 28 ಕ್ಷೇತ್ರಗಳ ಮೀಸಲಾತಿ:**

1) ಹಂಪಿ ಜಿ.ಪಂ ಕೇತ್ರ: ಸಾಮಾನ್ಯ ವರ್ಗ, 2) ಪಾಪಿನಾಯಕನಹಳ್ಳಿ ಜಿ.ಪಂ ಕ್ಷೇತ್ರ: ಅನುಸೂಚಿತ ಜಾತಿ (ಮಹಿಳೆ), 3) ಡಣಾಪುರ ಜಿ.ಪಂ. ಕ್ಷೇತ್ರ: ಅನುಸೂಚಿತ ಪಂಗಡ (ಮಹಿಳೆ), 4) ಬಡೇಲಡಕು ಜಿ.ಪಂ ಕ್ಷೇತ್ರ: ಅನುಸೂಚಿತ ಜಾತಿ, 5) ಗುಡೇಕೋಟೆ ಜಿ.ಪಂ ಕ್ಷೇತ್ರ: ಸಾಮಾನ್ಯ, 6) ಗುಂಡುಮುಣುಗು ಜಿ.ಪಂ ಕ್ಷೇತ್ರ: ಅನುಸೂಚಿತ ಪಂಗಡ (ಮಹಿಳೆ), 7) ಹುಡೇಂ ಜಿ.ಪಂ ಕ್ಷೇತ್ರ: ಸಾಮಾನ್ಯ (ಮಹಿಳೆ), 8) ಹೊಸಹಳ್ಳಿ ಜಿ.ಪಂ ಕ್ಷೇತ್ರ: ಸಾಮಾನ್ಯ, 9) ಉಜ್ಜಿನಿ ಜಿ.ಪಂ ಕ್ಷೇತ್ರ: ಸಾಮಾನ್ಯ (ಮಹಿಳೆ), 10) ಚಿರಬಿ ಜಿ.ಪಂ ಕ್ಷೇತ್ರ: ಸಾಮಾನ್ಯ, 11) ಕೋಗಳಿ ಜಿ.ಪಂ ಕ್ಷೇತ್ರ: ಅನುಸೂಚಿತ ಜಾತಿ (ಮಹಿಳೆ), 12) ಚಿಗಟೇರಿ ಜಿ.ಪಂ ಕ್ಷೇತ್ರ : ಹಿಂದುಳಿದ ವರ್ಗ(ಎ) 13) ಅರಸೀಕೆರೆ ಜಿ.ಪಂ.ಕ್ಷೇತ್ರ : ಅನುಸೂಚಿತ ಪಂಗಡ(ಮಹಿಳೆ) 14) ಉಚ್ಚಂಗಿದುರ್ಗ ಜಿ.ಪಂ.ಕ್ಷೇತ್ರ : ಸಾಮಾನ್ಯ. 15) ಕಂಚಿಕೆರೆ ಜಿಪಂ ಕ್ಷೇತ್ರ : ಅನುಸೂಚಿತ ಜಾತಿ(ಮಹಿಳೆ) 16) ತೆಲಗಿ ಜಿಪಂ ಕ್ಷೇತ್ರ : ಸಾಮಾನ್ಯ.17) ನೀಲಗುಂದ ಜಿಪಂ ಕ್ಷೇತ್ರ: ಅನುಸೂಚಿತ ಜಾತಿ. 18) ಬಾಗಳಿ ಜಿಪಂ ಕ್ಷೇತ್ರ: ಸಾಮಾನ್ಯ (ಮಹಿಳೆ). 19)ಹಲವಾಗಿಲು ಜಿಪಂ ಕ್ಷೇತ್ರ : ಸಾಮಾನ್ಯ(ಮಹಿಳೆ).

20) ಹೊಳಲು ಜಿಪಂ ಕ್ಷೇತ್ರ: ಸಾಮಾನ್ಯ.21) ಹಿರೇ ಹಡಗಲಿ ಜಿಪಂ ಕ್ಷೇತ್ರ : ಅನುಸೂಚಿತ ಪಂಗಡ. 22) ಸೋಗಿ ಜಿಪಂ ಕ್ಷೇತ್ರ: ಸಾಮಾನ್ಯ(ಮಹಿಳೆ) 23)ಇಟ್ಟಿಗಿ ಜಿಪಂ ಕ್ಷೇತ್ರ: ಹಿಂದುಳಿದ ವರ್ಗ ಅ.(ಮಹಿಳೆ). 24) ಕಾಲ್ವಿ ಪಶ್ಚಿಮ ಜಿಪಂ ಕ್ಷೇತ್ರ : ಅನುಸೂಚಿತ ಜಾತಿ(ಮಹಿಳೆ).25) ಹಂಪಸಾಗರ ಜಿಪಂ ಕ್ಷೇತ್ರ : ಸಾಮಾನ್ಯ(ಮಹಿಳೆ). 26) ತಂಬ್ರಹಳ್ಳಿ ಜಿಪಂ ಕ್ಷೇತ್ರ: ಸಾಮಾನ್ಯ. 27) ಹಂಪಾಪಟ್ಟಣ ಜಿಪಂ ಕ್ಷೇತ್ರ: ಅನುಸೂಚಿತ ಪಂಗಡ.28) ಮಾಲವಿ ಜಿಪಂ ಕ್ಷೇತ್ರ : ಅನಸೂಚಿತ ಜಾತಿ.

**ವಿಜಯನಗರ ಜಿಲ್ಲೆಯ 93 ತಾ.ಪಂ ಕ್ಷೇತ್ರಗಳಿಗೆ ಮೀಸಲು ಪ್ರಕಟ: ಅ.19ರ ವರೆಗೆ ಆಕ್ಷೇಪಣೆಗೆ ಅವಕಾಶ**

ಹೊಸಪೇಟೆ : ವಿಜಯನಗರ ಜಿಲ್ಲೆಯ ಆರು ತಾಲೂಕು ಪಂಚಾಯಿತಿಗಳ 93 ತಾಲೂಕು ಪಂಚಾಯಿತಿ ಕ್ಷೇತ್ರಗಳಿಗೆ ಕ್ಷೇತ್ರವಾರು ಮೀಸಲು ನಿಗದಿಪಡಿಸಿ ರಾಜ್ಯ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು ಅಕ್ಟೋಬರ್ 19ರ ಸಂಜೆ 5 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ.

**ಹೊಸಪೇಟೆ ತಾ.ಪಂ - ಒಟ್ಟು 11 ಕ್ಷೇತ್ರಗಳು**

1) ಬುಕ್ಕಸಾಗರ – ಸಾಮಾನ್ಯ, 2) ಹಂಪಿ – ಸಾಮಾನ್ಯ, 3) ನಾಗೇನಹಳ್ಳಿ – ಪ.ಪಂಗಡ (ಮಹಿಳೆ), 4) ಮಲಪನಗುಡಿ – ಸಾಮಾನ್ಯ (ಮಹಿಳೆ), 5) ಪಾಪಿನಾಯಕನಹಳ್ಳಿ – ಪ.ಪಂಗಡ, 6) ಗಾದಿಗನೂರು – ಸಾಮಾನ್ಯ (ಮಹಿಳೆ), 7) ಕಾಕುಬಾಳು – ಪ.ಜಾತಿ (ಮಹಿಳೆ), 8) ಡಣಾಪುರ – ಸಾಮಾನ್ಯ (ಮಹಿಳೆ), 9) ಜಿ.ನಾಗಲಾಪುರ – ಸಾಮಾನ್ಯ, 10) ಡಣಾಯಕನಕೆರೆ – ಪ.ಜಾತಿ, 11) ಚಿಲಕನಹಟ್ಟಿ – ಪ.ಜಾತಿ (ಮಹಿಳೆ)

**ಹಡಗಲಿ ತಾ.ಪಂ - ಒಟ್ಟು 17 ಕ್ಷೇತ್ರಗಳು**

1) ಮೈಲಾರ – ಹಿಂದುಳಿದ ವರ್ಗ–ಅ (ಮಹಿಳೆ), 2) ಹೊಳಲು – ಸಾಮಾನ್ಯ, 3) ಹ್ಯಾರಡ – ಸಾಮಾನ್ಯ (ಮಹಿಳೆ), 4) ಕತ್ತೆಬೆನ್ನೂರು – ಹಿಂದುಳಿದ ವರ್ಗ–ಆ, 5) ಅಂಗೂರು – ಪ.ಜಾತಿ (ಮಹಿಳೆ), 6) ಹಿರೇಹಡಗಲಿ – ಸಾಮಾನ್ಯ (ಮಹಿಳೆ), 7) ಮಾಗಳ – ಸಾಮಾನ್ಯ, 8) ಕೆ.ಅಯ್ಯನಹಳ್ಳಿ – ಸಾಮಾನ್ಯ, 9) ಮಾನ್ಯರ ಮಸಲವಾಡ – ಪ.ಜಾತಿ (ಮಹಿಳೆ), 10) ನಾಗತಿ ಬಸಾಪುರ – ಪ.ಜಾತಿ (ಮಹಿಳೆ), 11) ಸೋಗಿ – ಸಾಮಾನ್ಯ, 12) ಇಟ್ಟಿಗಿ – ಸಾಮಾನ್ಯ, 13) ಉತ್ತಂಗಿ – ಸಾಮಾನ್ಯ (ಮಹಿಳೆ), 14) ಹೊಳಗುಂದಿ – ಸಾಮಾನ್ಯ (ಮಹಿಳೆ), 15) ದಾಸರಹಳ್ಳಿ – ಪ.ಪಂಗಡ (ಮಹಿಳೆ), 16) ಸೋವೇನಹಳ್ಳಿ – ಪ.ಜಾತಿ, 17) ಕಾಲ್ವಿ ಪಶ್ಚಿಮ – ಪ.ಜಾತಿ

**ಕೂಡ್ಲಿಗಿ ತಾ.ಪಂ - ಒಟ್ಟು 19 ಕ್ಷೇತ್ರಗಳು**

1) ಶಿವಪುರ – ಪ.ಜಾತಿ (ಮಹಿಳೆ), 2) ಹಿರೇಹೆಗ್ಡಾಳ್ – ಸಾಮಾನ್ಯ (ಮಹಿಳೆ), 3) ಬಡೇಲಡಕು – ಸಾಮಾನ್ಯ, 4) ಮೊರಬ – ಸಾಮಾನ್ಯ (ಮಹಿಳೆ), 5) ಜರ್ಮಲಿ – ಪ.ಪಂಗಡ (ಮಹಿಳೆ), 6) ರಾಮದುರ್ಗ – ಸಾಮಾನ್ಯ, 7) ಗುಡೇಕೋಟೆ – ಸಾಮಾನ್ಯ, 8) ಅಪ್ಪೇನಹಳ್ಳಿ – ಸಾಮಾನ್ಯ, 9) ಚಿರತಗುಂಡು – ಪ.ಪಂಗಡ (ಮಹಿಳೆ), 10) ಗುಂಡುಮುಣುಗು – ಪ.ಪಂಗಡ, 11) ಮಾಕನಡಕು – ಪ.ಜಾತಿ (ಮಹಿಳೆ), 12) ಪೂಜಾರಹಳ್ಳಿ – ಪ.ಪಂಗಡ, 13) ಹೂಡೇಂ – ಪ.ಪಂಗಡ, 14) ಆಲೂರು – ಪ.ಜಾತಿ, 15) ಹಿರೇಕುಂಬಳಕುಂಟೆ – ಸಾಮಾನ್ಯ (ಮಹಿಳೆ), 16) ಹೊಸಹಳ್ಳಿ – ಸಾಮಾನ್ಯ (ಮಹಿಳೆ), 17) ಬಣವಿಕಲ್ಲು – ಸಾಮಾನ್ಯ (ಮಹಿಳೆ), 18) ಸೂಲದಹಳ್ಳಿ – ಪ.ಪಂಗಡ (ಮಹಿಳೆ), 19) ಚೌಡಾಪುರ – ಸಾಮಾನ್ಯ

**ಕೊಟ್ಟೂರು ತಾ.ಪಂ - ಒಟ್ಟು 9 ಕ್ಷೇತ್ರಗಳು**

1) ನಿಂಬಳಗೇರಿ – ಸಾಮಾನ್ಯ, 2) ಉಜ್ಜಿನಿ – ಹಿಂದುಳಿದ ವರ್ಗ–ಅ (ಮಹಿಳೆ), 3) ತೂಲಹಳ್ಳಿ – ಸಾಮಾನ್ಯ (ಮಹಿಳೆ), 4) ಕೆ.ಅಯ್ಯನಹಳ್ಳಿ – ಸಾಮಾನ್ಯ, 5) ಅಲಬೂರು – ಸಾಮಾನ್ಯ (ಮಹಿಳೆ), 6) ದೂಪದಹಳ್ಳಿ – ಪ.ಜಾತಿ (ಮಹಿಳೆ), 7) ಹ್ಯಾಳ್ಯಾ – ಪ.ಜಾತಿ, 8) ಕಂದಗಲ್ಲು – ಸಾಮಾನ್ಯ, 9) ರಾಂಪುರ – ಪ.ಪಂಗಡ (ಮಹಿಳೆ)

ಪುಟ– 3

## ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿ ಕೇಂದ್ರ ಸ್ಥಾಪನೆ

**ವಿಜಯನಗರ (ಹೊಸಪೇಟೆ) :**

ಬೆಂಬಲ ಬೆಲೆ ಯೋಜನೆಯಡಿ 2026–27 ನೇ ಸಾಲಿಗೆ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಾರಾಟ ಮಹಾ ಮಂಡಳಿ ವತಿಯಿಂದ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ.

ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನಂದಿಬೇವೂರು, ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ ಉಪನಾಯಕನಹಳ್ಳಿ, ಕೂಡ್ಲಿಗಿಯ ಚಂದ್ರಶೇಖರಪುರ ಹಾಗೂ ಕೊಟ್ಟೂರು ತಾಲ್ಲೂಕಿನ ದೂಪದಹಳ್ಳಿ ಗ್ರಾಮಗಳಲ್ಲಿ ಖರೀದಿ ಕೇಂದ್ರಗಳು ಸ್ಥಾಪಿಸಲಾಗಿದ್ದು, ಪ್ರತಿ ಕ್ವಿಂಟಾಲ್‌ಗೆ ರೂ.8343 ರಂತೆ ಖರೀದಿಸಲಾಗುವುದು.

ರೈತರು ಖರೀದಿ ಕೇಂದ್ರಗಳಲ್ಲಿ ನೊಂದಣಿ ಮಾಡಿಕೊಳ್ಳಲು ಡಿಸೆಂಬರ್ 19 ಕೊನೆಯ ದಿನವಾಗಿದ್ದು, ಡಿಸೆಂಬರ್ 29 ಖರೀದಿಗೆ ಕೊನೆಯ ದಿನಾಂಕವಾಗಿದೆ. ನಿಗದಿತ ಅವಧಿಯೊಳಗೆ ನೊಂದಣಿಗೊಂಡ ರೈತರಿಂದ ಪ್ರತಿ ಎಕರೆಗೆ 4 ಕ್ವಿಂಟಾಲ್ ಗರಿಷ್ಠ 20 ಕ್ವಿಂಟಾಲ್ ಖರೀದಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇಲಖೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ, ಎಸ್ಐಆರ್ ಪ್ರಕ್ರಿಯೆ ರದ್ದತಿಗೆ ಆಗ್ರಹಿಸಿ ರಾಷ್ಟ್ರಪತಿಗೆ ಹೊಸಪೇಟೆ ಕಾಂಗ್ರೆಸ್ ಮನವಿ

**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ :** ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ಮತ್ತು ಖಖಖ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸುವಂತೆ ಆಗ್ರಹಿಸಿ ರಾಷ್ಟ್ರಪತಿ ಅವರಿಗೆ ಹೊಸಪೇಟೆ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮನವಿ ಸಲ್ಲಿಸಲಾಯಿತು.

ಮನವಿಯಲ್ಲಿ ಭಾರತದ ಚುನಾವಣಾ ಆಯೋಗವು ಸ್ವತಂತ್ರ, ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕಾದ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಯಾಗಿದೆ. ಆದರೆ ಇತ್ತೀಚಿನ ಬೆಳವಣಿಗೆಗಳು ಹಾಗೂ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರ ನಿರ್ಧಾರಗಳು ಚುನಾವಣಾ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಕುಸಿಯುವಂತೆ ಮಾಡಿದೆ. ಬಿಜೆಪಿ ಕೆಲವು ರಾಜ್ಯಗಳಲ್ಲಿ ಅಧಿಕಾರ ಹಿಡಿಯಲು ಉದ್ದೇಶಪೂರ್ವಕವಾಗಿ ಸುಮಾರು 13 ಕೋಟಿ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಕರ್ನಾಟಕದಲ್ಲಿ ಅಕ್ಟೋಬರ್ 6ರಂದು ಜಯನಗರದಲ್ಲಿ ನಮೂನೆ–7 ದುರ್ಬಳಕೆ ಆರೋಪದ ಮೇಲೆ 5 ಜನರ ವಿರುದ್ಧ ಎಫ್ಐಆರ್ ದಾಖಲಾಗಿದ್ದು, ಇದರಲ್ಲಿ ಬಿಜೆಪಿ ಮುಖಂಡರು ಭಾಗಿಯಾಗಿದ್ದಾರೆ. ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ 7,561 ಮತದಾರರ ಹೆಸರು ಅಳಿಸಲು ಸಂಚು ರೂಪಿಸಿದ್ದ ಬಿಜೆಪಿ ಏಜೆಂಟ್ ವಿರುದ್ಧವೂ ಎಫ್ಐಆರ್ ಆಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನಲ್ಲಿ 243 ಅರ್ಹ ಮತದಾರರ ಹೆಸರುಗಳನ್ನು ರದ್ದು ಮಾಡಿಸಲು ಕೊಪ್ಪ ತಾಲೂಕು ಬಿಜೆಪಿ ಅಧ್ಯಕ್ಷರು ಆಕ್ಷೇಪಣಾ ಅರ್ಜಿ (ಫಾರಂ–7) ಸಲ್ಲಿಸಿ ನಂತರ ಹಿಂಪಡೆದಿದ್ದಾರೆ. ಜೀವಂತವಾಗಿರುವ ವ್ಯಕ್ತಿಗಳನ್ನು ಸತ್ತಿದ್ದಾರೆ ಎಂದು ತೋರಿಸಲು ಯತ್ನಿಸಿದ ಪ್ರಕರಣಗಳೂ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಮತದಾರರ ಮತಗಳನ್ನೇ ಗುರಿಯಾಗಿಸಲಾಗಿದೆ ಎಂದು ದೂರಲಾಗಿದೆ.

ಆದ್ದರಿಂದ ಪ್ರಸ್ತುತ ಜಾರಿಯಲ್ಲಿರುವ ಖಖಖ ಪ್ರಕ್ರಿಯೆಯು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮತ್ತು ನಾಗರಿಕರ ಹಕ್ಕುಗಳಿಗೆ ಧಕ್ಕೆ ತಂದಿದ್ದು, ಇದನ್ನು ತಕ್ಷಣದಿಂದಲೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.




ಹೊಸಪೇಟೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಕಾಲ್ನಡಿಗೆ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ, ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು. ಹೊಸಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ರವಿಕುಮಾರ್ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕಮಲಾಪುರ ಬ್ಲಾಕ್ ಅಧ್ಯಕ್ಷ ಅಲ್ಲಾಭಕ್ಷಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಡಿ.ವೆಂಕಟರಮಣ, ಪ.ಜಾ. ಜಿಲ್ಲಾಧ್ಯಕ್ಷ ಸೋಮಶೇಖರ್ ಬಣ್ಣದಮನೆ, ನಗರಸಭೆ ಸದಸ್ಯ ಕೆ.ಮಹೇಶ್, ಮಹಿಳಾ ಘಟಕದ ಅಧ್ಯಕ್ಷೆ ಯೋಗಲಕ್ಷ್ಮಿ, ವಕೀಲ ಕೆ.ಮಹೇಶ್, ಮಾಜಿ ನಗರಸಭೆ ಸದಸ್ಯರಾದ ಬಡಾವಲಿ, ಪಲ್ಲೇದ ಸಿದ್ದೇಶ್, ಗಿಂಜಿ ಮಂಜುನಾಥ, ಗುಜ್ಜಲ್ ನಿಂಗಪ್ಪ, ಕಾರಿಗನೂರು ಬಸವರಾಜಸ್ವಾಮಿ, ಸಣ್ಣಮಾರೆಪ್ಪ, ಅನಿತಾ ಎಸ್., ಯುವ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಪ್ರದೀಪ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಶಿವಕುಮಾರ್, ರಾಜಸಾಬ್, ರಾಘವೇಂದ್ರ ಸೇರಿದಂತೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

## ಸಕ್ಕರೆ ಕಾರ್ಖಾನೆ ಭೂಮಿಪೂಜೆ ಆಗುವವರೆಗೂ ಹೋರಾಟ ನಿಲ್ಲಲ್ಲ

### ಅ.18ಕ್ಕೆ ಶಾಸಕ ಗವಿಯಪ್ಪ ನಿವಾಸದ ಎದುರು ಧರಣಿ

**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ :** ಈ ಭಾಗದ ರೈತರ ಬಹುದಿನದ ಬೇಡಿಕೆಯಾಗಿರುವ ಸಕ್ಕರೆ ಕಾರ್ಖಾನೆಯನ್ನು ಶೀಘ್ರ ಆರಂಭಿಸಬೇಕು ಎಂದು ಒತ್ತಾಯಿಸಿ, ಅಕ್ಟೋಬರ್ 18ರಂದು ಸ್ಥಳೀಯ ಶಾಸಕ ಹೆಚ್.ಆರ್. ಗವಿಯಪ್ಪ ಅವರ ನಿವಾಸದ ಎದುರು ಧರಣಿ ಸತ್ಯಾಗ್ರಹ ನಡೆಸಲು ಹೊಸಪೇಟೆ ಸಕ್ಕರೆ ಕಾರ್ಖಾನೆ ಹೋರಾಟ ಸಮಿತಿ ನಿರ್ಧರಿಸಿದೆ.

ಸ್ಥಳೀಯ ರೈತ ಭವನದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೋರಾಟ ಸಮಿತಿ ಮುಖಂಡ ಎಂ. ಜಂಬಯ್ಯ ನಾಯಕ ಈ ವಿಷಯ ತಿಳಿಸಿದರು.

"ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸ್ಥಳೀಯ ಶಾಸಕ ಹೆಚ್.ಆರ್. ಗವಿಯಪ್ಪ ಭರವಸೆ ನೀಡಿದ್ದರು. ಆದರೆ ಈವರೆಗೆ ನಮ್ಮ ಬೇಡಿಕೆ ಈಡೇರಿಲ್ಲ. ಈ ಹಿನ್ನೆಲೆಯಲ್ಲಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ" ಎಂದರು.



"ಅ.18 ರಂದು ರೈತರು, ಕೃಷಿ ಕೂಲಿ ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ವಕೀಲರು, ಸಾಹಿತಿಗಳು, ಕಲಾವಿದರು ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲಾಗುವುದು. ಇದು ಯಾವುದೇ ಪಕ್ಷ, ವ್ಯಕ್ತಿಯ ವಿರುದ್ಧದ ಹೋರಾಟವಲ್ಲ, ಪಕ್ಷಾತೀತವಾಗಿ ರೈತರ ಹೋರಾಟವಾಗಿದೆ. ಸಕ್ಕರೆ ಕಾರ್ಖಾನೆಗೆ ಭೂಮಿ ಪೂಜೆ ಆಗುವವರೆಗೆ ನಮ್ಮ ಹೋರಾಟ ಮುಂದುವರೆಯಲಿದೆ" ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡ ಜಿ. ಖಾಜಾ ಹುಸೇನ್ ನಿಯಾಜಿ, ಹುಡಾ ಮಾಜಿ ಅಧ್ಯಕ್ಷ ಎಲ್. ಸಿದ್ದನಗೌಡ, ಹುಡಾ ಅಧ್ಯಕ್ಷ ಹೆಚ್.ಎನ್. ಮಹಮದ್ ಇಮಾಮ್ ನಿಯಾಜಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಆರ್. ಕೊಟ್ರೇಶ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಅಮಾಜಿ ಹೇಮಣ್ಣ, ರೈತ ಮುಖಂಡರಾದ ಸೈಯದ್ ಸಮೀವುಲ್ಲಾ, ಟಿ. ನಾಗರಾಜ, ಸಣ್ಣಕ್ಕಿ ರುದ್ರಪ್ಪ, ಎಂ. ಜಡೆಪ್ಪ, ಬಾಬು, ದುರುಗಪ್ಪ ಪೂಜಾರಿ, ಜಂಬಾನಳ್ಳಿ ವಸಂತ, ಕಿಚಿಡಿ ಶ್ರೀನಿವಾಸ, ಕಟಿಗಿ ಜಂಬಯ್ಯ, ವೈ. ಯಮುನೇಶ್, ಎನ್. ಯಲ್ಲಾಲಿಂಗ, ಎಲ್.ಎಸ್. ಆನಂದ್, ಕೆ.ಎಂ. ಸಂತೋಷ ಕುಮಾರ್, ಬಿ. ತಾಯಪ್ಪ ನಾಯಕ, ಜೈರುದ್ದೀನ್, ತಾರಿಹಳ್ಳಿ ಜಂಬಯ್ಯ, ರಾಮಚಂದ್ರ ಬಾಬು ಇದ್ದರು.

## ಅ.14ರಂದು ಯುವ ಸಂಸತ್ ಸಭೆ: ತಹಶೀಲ್ದಾರ್ ನೇತ್ರಾವತಿ

**ಹೊಸಪೇಟೆ ಧ್ವನಿ ನ್ಯೂಸ್ :**



**ಕೂಡ್ಲಿಗಿ :** ಯುವಜನರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನದ ಆಶಯಗಳು ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಅಕ್ಟೋಬರ್ 14ರಂದು ಬೆಳಿಗ್ಗೆ 9 ಗಂಟೆಗೆ ಯುವ ಸಂಸತ್ ಸಭೆ ಆಯೋಜಿಸಲಾಗಿದೆ ಎಂದು ತಹಶೀಲ್ದಾರ್ ವಿ.ಕೆ. ನೇತ್ರಾವತಿ ತಿಳಿಸಿದ್ದಾರೆ.

ಯುವಜನರು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಹಾಗೂ ಸಂವಿಧಾನಬದ್ಧ ಕರ್ತವ್ಯಗಳ ಕುರಿತು ಅರಿವು ಮೂಡಿಸಿಕೊಳ್ಳಲು ಯುವ ಸಂಸತ್ ಸಭೆ ಸಹಕಾರಿಯಾಗಲಿದೆ.ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಭೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಹಸೀಲ್ದಾರ್ ವಿ. ಕೆ. ನೇತ್ರಾವತಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಎಸ್‌ಐಆರ್ ಪ್ರಕ್ರಿಯೆ ರದ್ದತಿಗೆ ಆಗ್ರಹ: ಹರಪನಹಳ್ಳಿಯಲ್ಲಿ ಸಿಪಿಐಎಂಎಲ್ ಮನವಿ

**ಹೊಸಪೇಟೆ ಧ್ವನಿ ನ್ಯೂಸ್ :**

**ಹರಪನಹಳ್ಳಿ :** ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಖಖಖ) ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ, ಜನವರಿ 2025ರ ಮತದಾರರ ಪಟ್ಟಿಯನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿ ಸಿಪಿಐ(ಎಂಎಲ್) ಲಿಬರೇಷನ್ ಕಾರ್ಯಕರ್ತರು ಸೋಮವಾರ ತಹಶೀಲ್ದಾರ್ ಕಚೇರಿ ಮೂಲಕ ಮನವಿ ಸಲ್ಲಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ತಾಲ್ಲೂಕು ಆಡಳಿತ ಸೌಧ ತಲುಪಿತು. ಗ್ರೇಡ್–2 ತಹಶೀಲ್ದಾರ್ ನಟರಾಜ್ ಮೂಲಕ ಚುನಾವಣಾ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಮತದಾರರ ಪಟ್ಟಿಯಿಂದ ಬಡವರು, ದಲಿತರು, ಅಲ್ಪಸಂಖ್ಯಾತರು ಹಾಗೂ ಅಂಚಿನಲ್ಲಿರುವ ಸಮುದಾಯಗಳ ಹೆಸರುಗಳನ್ನು ವ್ಯವಸ್ಥಿತವಾಗಿ ಅಳಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಫಾರಂ–7ರ ದುರುಪಯೋಗ ತಡೆಯಬೇಕು ಮತ್ತು ಚುನಾವಣಾ ಆಯೋಗದ ಸ್ವಾಯತ್ತತೆ ಕಾಪಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಸಂದೇರ ಪರಶುರಾಮ್, ಸಂತೋಷ್ ಗುಳೇದಟ್ಟಿ, ಹುಲಿಕಟ್ಟಿ ಮೈಲಪ್ಪ, ರಾಜು, ಮೋಹನ್, ಮಿಥುನ್ ಶುಕ್ರು, ಬಾಬು ಪೈಂಟರ್, ಇಬ್ರಾಹಿಂ ಸಾಹೇಬ್, ಮೊಹಮ್ಮದ್ ರಫೀಕ್, ದಾದು ಅನ್ವರ್, ಟೈಲ್ಸ್ ದಾದು, ಗುಣಿ–ಕೆರಿ ರಾಜ ಭಕ್ಷಿ, ರಿಯಾಜ್, ವಾಜೀದ್, ವಿನಯ್, ಲಕ್ಷ್ಮಣ್, ಅರ್ಜುನ್, ಕಾರ್ತಿಕ್, ಭರತ್, ಮನು, ಇಬ್ರಾಹಿಂ, ಹುಲಿಕಟ್ಟಿ ಪಕ್ಕಿರಪ್ಪ, ಮೆಹಬೂಬ್ ಸಾಬ್ ಸೇರಿದಂತೆ ಇತರರು ಇದ್ದರು.



## ಮಾಫಿ ಸಾಕ್ಷಿ ವಿರೋಧಿಸುವ ಅಧಿಕಾರ ಆರೋಪಿಗೆ ಇಲ್ಲ; ದರ್ಶನ್‌ಗೆ ಸುಪ್ರೀಂ ಕೋರ್ಟ್

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದ್ದು, ಪ್ರಕರಣದ ಆರೋಪಿ ಪ್ರದೂಷ್‌ನನ್ನು ಅಪ್ರೂವರ್ ಆಗಿ ಪರಿಗಣಿಸುವುದನ್ನು ಪ್ರಶ್ನಿಸಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಈ ಮೂಲಕ ಮಾಫಿ ಸಾಕ್ಷಿ ಪ್ರಕ್ರಿಯೆಗೆ ತಡೆ ತರಲು ಯತ್ನಿಸುತ್ತಿದ್ದ ದರ್ಶನ್ ಪರ ಕಾನೂನು ತಂಡಕ್ಕೆ ಭಾರಿ ಹಿನ್ನಡೆಯಾಗಿದೆ.

ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಹಾಗೂ ನ್ಯಾಯಮೂರ್ತಿ ವಿನೋದ್ ಚಂದ್ರನ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಪೀಠವು, ಪ್ರಕರಣದಲ್ಲಿ ಒಬ್ಬ ಆರೋಪಿಯನ್ನು ಮಾಫಿ ಸಾಕ್ಷಿಯನ್ನಾಗಿ ಪರಿಗಣಿಸುವುದನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಯಾವುದೇ ಕಾನೂನುಬದ್ಧ ಅಧಿಕಾರ ಆರೋಪಿಗಳಿಗೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿ ಅರ್ಜಿಯನ್ನು ತಿರಸ್ಕರಿಸಿತು.

ದರ್ಶನ್ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ ಹಿರಿಯ ವಕೀಲ ನಾಗಮುತ್ತು, ಪ್ರಕರಣದ ಪ್ರಮುಖ ಆರೋಪಿಯೊಬ್ಬ ಮಾಫಿ ಸಾಕ್ಷಿಯಾಗುವುದನ್ನು ಮತ್ತು ಆತನ ಹೇಳಿಕೆ ದಾಖಲಿಸಿಕೊಳ್ಳುವುದನ್ನು ಸೆಷನ್ಸ್ ನ್ಯಾಯಾಲಯ ಪರಿಗಣಿಸಲು ಬರುವುದಿಲ್ಲ. ಮಾಫಿ ಸಾಕ್ಷಿ ಹೇಳಿಕೆಯನ್ನು ಪರಿಗಣಿಸುವ ಅಧಿಕಾರ ಇರುವುದು ಕೇವಲ ಪ್ರಿನ್ಸಿಪಲ್ ಕೋರ್ಟ್‌ಗೆ ಮಾತ್ರ. ಟ್ರಯಲ್ ಕೋರ್ಟ್‌ಗೆ ಈ ರೀತಿಯ ಅಧಿಕಾರವಿಲ್ಲ ಎಂದು ವಾದ ಮಂಡಿಸಿದ್ದರು.

ದರ್ಶನ್ ಪರ ವಕೀಲರ ಈ ವಾದವನ್ನು ಸಂಪೂರ್ಣವಾಗಿ ತಳ್ಳಿಹಾಕಿದ ನ್ಯಾಯಪೀಠ, ಮಾಫಿ ಸಾಕ್ಷಿಯ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಎಲ್ಲ ಅಧಿಕಾರವೂ ವಿಚಾರಣಾ ನ್ಯಾಯಾಲಯಕ್ಕೆ ಇದೆ. ಟ್ರಯಲ್ ಕೋರ್ಟ್‌ಗೆ ಅಧಿಕಾರವಿಲ್ಲ ಎಂಬ ವಾದವನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದು ಖಡಕ್ ಆಗಿ ಹೇಳಿತು.

ಇದೇ ವೇಳೆ ರಾಜ್ಯ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ, ಮಾಫಿ ಸಾಕ್ಷಿ ಹೇಳಿಕೆ ದಾಖಲಿಸಿಕೊಳ್ಳುವುದನ್ನು ಪ್ರಶ್ನಿಸುವ ಹಕ್ಕು ಆರೋಪಿಗಳಿಗೆ ಇಲ್ಲ. ಆದರೆ, ಆ ಸಾಕ್ಷಿ ನೀಡುವ ಹೇಳಿಕೆಯ ಆಧಾರದ ಮೇಲೆ ಆತನನ್ನು ಕ್ರಾಸ್ ಎಕ್ಸಾಮಿನೇಷನ್‌ಗೆ ಒಳಪಡಿಸುವ ಹಕ್ಕು ಆರೋಪಿಗಳಿಗೆ ಇದ್ದೇ ಇರುತ್ತದೆ. ಹೈಕೋರ್ಟ್‌ನಲ್ಲೂ ನಡೆದ ವಿಚಾರಣೆ ವೇಳೆ ಆರೋಪಿಗಳು ಹಾಜರಿರಲು ಅವಕಾಶ ನೀಡಲಾಗಿತ್ತು" ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಸರ್ಕಾರದ ವಾದವನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್, ಆರೋಪಿ ಕಡೆಯವರಿಗೆ ಮಾಫಿ ಸಾಕ್ಷಿಯನ್ನು ಕೇವಲ ಪಾಟಿಸವಾಲು ನಡೆಸುವ ಹಕ್ಕಿದೆಯೇ ಹೊರತು, ಆ ಪ್ರಕ್ರಿಯೆಯನ್ನೇ ವಿರೋಧಿಸುವ ಅಥವಾ ಪ್ರಶ್ನಿಸುವ ಹಕ್ಕಿಲ್ಲ ಎಂದು ಪುನರುಚ್ಚರಿಸಿ ಆದೇಶ ನೀಡಿತು.

## ರಸ್ತೆ ಬದಿಯ ಟ್ರಾನ್ಸ್‌ಫಾರ್ಮರ್ ಸ್ಫೋಟ; ಪಾದಚಾರಿಗೆ ಗಾಯ

**ಬೆಂಗಳೂರು:** ಈಶಾನ್ಯ ಬೆಂಗಳೂರಿನ ಬಾಗಲೂರು ಕ್ರಾಸ್ ಸಮೀಪದ ಅಮೆಜಾನ್ ಕಚೇರಿಯ ಹೊರಭಾಗದ ಫುಟ್‌ಪಾತ್‌ನಲ್ಲಿ ಅಳವಡಿಸಲಾಗಿದ್ದ ಟ್ರಾನ್ಸ್‌ಫಾರ್ಮರ್ ಬಾಕ್ಸ್‌ವೊಂದು ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಯೊಬ್ಬರು ಗಾಯಗೊಂಡಿದ್ದಾರೆ.

ಸ್ಫೋಟದ ವೇಳೆ ನೆಲಕ್ಕೆ ಬಿದ್ದ ಪರಿಣಾಮ, ಓರ್ವ ಪಾದಚಾರಿಗೆ ಗಾಯಗಳಾಗಿವೆ. ಅವರ ಕೈಗಳಿಗೆ ತೀವ್ರ ಸುಟ್ಟ ಗಾಯಗಳಾದರೆ, ಮತ್ತೊಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಮೀಪದಲ್ಲಿ ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾಳೆ.

ಅಮೆಜಾನ್ ಕಚೇರಿ ಆವರಣದ ಗೇಟ್ ನಂ. 3ರ ಹೊರಭಾಗದಲ್ಲಿ ಈ ಘಟನೆ ನಡೆದಿದ್ದು, ಯಲಹಂಕ ಓಲ್ಡ್ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತದೆ.

ಗಾಯಗೊಂಡವರನ್ನು ಮೊಹಮ್ಮದ್ ಅಫ್ರೋಜ್ ಎಂದು ಗುರುತಿಸಲಾಗಿದೆ. ಘಟನೆ ಕುರಿತು ಪ್ರತಿಕ್ರಿಯಿಸಿದ ಈಶಾನ್ಯ ವಿಭಾಗದ ಉಪ ಪೊಲೀಸ್ ಆಯುಕ್ತ ಮಿಥುನ್ ಕುಮಾರ್ ಸತೇಡ್, ಇದು ಅಮೆಜಾನ್ ಕಚೇರಿಯ ಗೇಟ್ ನಂ. 3ರ ಬಳಿ ನಡೆದಿದೆ. ಬಾಗಲೂರು ಕ್ರಾಸ್ ಸಮೀಪ ಯಲಹಂಕ ಓಲ್ಡ್ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೊಹಮ್ಮದ್ ಅಫ್ರೋಜ್ ಗಾಯಗೊಂಡಿದ್ದಾರೆ. ಅವರು ಸುರಕ್ಷಿತವಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಹಠಾತ್ ಸಂಭವಿಸಿದ ಸ್ಫೋಟದ ದೃಶ್ಯವು ಘಟನೆಯನ್ನು ಕಣ್ಣಾರೆ ಕಂಡ ಅರುಣ್ ಜಿ ಅವರ ಕಾರಿನ ಡ್ಯಾಶ್‌ಕ್ಯಾಮ್‌ನಲ್ಲಿ ಸೆರೆಯಾಗಿದೆ.

ನನ್ನ ಡ್ಯಾಶ್‌ಕ್ಯಾಮ್‌ನಲ್ಲಿ ಘಟನೆ ಸೆರೆಯಾಗಿದೆ. ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರಿಂದ ನಾನು ಕಾರಿನಿಂದ ಹೊರಬರಲು ಸಾಧ್ಯವಾಗಲಿಲ್ಲ. ನನ್ನ ಮಕ್ಕಳು ಕಾರಿನೊಳಗಿದ್ದರು ಎಂದು ಅರುಣ್ ಜಿ ತಿಳಿಸಿದ್ದಾರೆ.

ವಿದ್ಯುತ್ ದೋಷಕ್ಕೆ ಕಾರಣವೇನು ಎಂಬುದರ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.

### ಬೆಂಗಳೂರಿನಲ್ಲಿ ಸಿಜೆಪಿ ಪ್ರತಿಭಟನೆ

# ಪ್ರಕಾಶ್ ರಾಜ್, ಯೂಟೂಬರ್ ಧ್ರುವ್ ರಾಠಿ ಭಾಗಿ; ಸಿಇಸಿ ರಾಜೀನಾಮೆಗೆ ಬಿಗಿಪಟ್ಟು

**ಬೆಂಗಳೂರು:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಭಾರಿ ಪ್ರತಿಭಟನೆ ನಡೆಯಿತು.

ನಟ–ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ರಾಜ್, ಯೂಟ್ಯೂಬರ್ ಧ್ರುವ್ ರಾಠೀ ಹಾಗೂ ಅಎಕ ಸಂಸ್ಥಾಪಕ ಅಭಿಜೀತ್ ದೀಪ್ಕೆ ಪ್ರತಿಭಟನೆಯಲ್ಲಿ ಭಾಗವಹಿಸಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದರು.



SIRನಿಂದ ತೊಂದರೆಗೊಳಗಾದವರ ಸಮಸ್ಯೆಗಳನ್ನು ಆಲಿಸುವ ಉದ್ದೇಶದಿಂದ 'ಜನತಾ ನ್ಯಾಯಮಂಡಳಿ' ರೂಪದಲ್ಲಿ ಪ್ರತಿಭಟನೆ ಆಯೋಜಿಸಲಾಗಿದ್ದು, SIR ಪ್ರಕ್ರಿಯೆ ರದ್ದುಗೊಳಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನಾ ಸ್ಥಳದಲ್ಲಿ ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಸೇರಿದ್ದರು. SIRಪ್ರಕ್ರಿಯೆ ವಿರುದ್ಧ ಘೋಷಣೆಗಳನ್ನು ಕೂಗಿದ ಅವರು, ಈ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ರಾಜ್ಯದಾದ್ಯಂತ SIR ಪ್ರಕ್ರಿಯೆಯಿಂದ ತೊಂದರೆಗೊಳಗಾದವರ ಸಮಸ್ಯೆಗಳನ್ನು ಆಲಿಸುವ ಉದ್ದೇಶದಿಂದ ಪ್ರತಿಭಟನೆಯನ್ನು 'ಜನತಾ ನ್ಯಾಯಮಂಡಳಿ' ರೂಪದಲ್ಲಿ ಆಯೋಜಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಇದರ ಬಳಿಕ ಮಹಿಳೆಯರಿಗೆ ಬೆಂಬಲ ಸೂಚಿಸುವ ಉದ್ದೇಶದಿಂದ 'ಚಪ್ಪಲ್ ಪ್ರತಿಭಟನೆ' ನಡೆಸಲಾಗುವುದು ಎಂದು ಅವರು ಹೇಳಿದರು. ಪ್ರತಿಭಟನಾ ಸ್ಥಳದಲ್ಲಿ ಅಳವಡಿಸಲಾಗಿದ್ದ ಪೋಸ್ಟರ್‌ಗಳಲ್ಲಿ ``Error404-NameNotFound", ``It's donebro, resignsir" ಹಾಗೂ ``Don't eraseus, hearus" ಎಂಬ ಘೋಷಣೆಗಳು ಕಂಡುಬಂದವು.

``Dictatorship will not be tolerated", ``Vote theft" ಹಾಗೂ "Gyanesh Kumar, gaddi leave your chair" ಎಂಬ ಬರಹಗಳನ್ನೂ ಪ್ರದರ್ಶಿಸಲಾಗಿತ್ತು.

ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್ ಮತ್ತು ಸುಭಾಷ್ ಚಂದ್ರ ಬೋಸ್ ಅವರ ಚಿತ್ರಗಳಿರುವ ಪೋಸ್ಟರ್‌ಗಳನ್ನೂ ಪ್ರತಿಭಟನಾ ಸ್ಥಳದಲ್ಲಿ ಪ್ರದರ್ಶಿಸಲಾಯಿತು. Grand Theft Democracy ಎಂಬ ಘೋಷಣೆಯುಳ್ಳ ಪೋಸ್ಟರ್ ಕೂಡ ಗಮನ ಸೆಳೆಯಿತು.

ಈ ನಡುವೆ ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರದ ಪೊಲೀಸರು ಫ್ರೀಡಂ ಪಾರ್ಕ್‌ನಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಕೈಗೊಂಡಿದ್ದರು.

## ಅಖಿಲ ಭಾರತ ಕ್ರೈಸ್ತ ಮಹಾಸಭಾ (ರಿ) ಸಿರುಗುಪ್ಪ ತಾಲೂಕು ಘಟಕದ ಪದಾಧಿಕಾರಿಗಳ ನೇಮಕ



**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ(ಸಿರುಗುಪ್ಪ) :** ಅಖಿಲ ಭಾರತ ಕ್ರೈಸ್ತ ಮಹಾಸಭಾ ರಿಜಿಸ್ಟರ್ ಈ ಸಂಘ–ಕ್ಕೆ ತಾಲೂಕ ಘಟಕದ ಪದಾಧಿಕಾರಿಗಳನ್ನು ಇತ್ತೀಚೆಗೆ ನೇಮಕ ಮಾಡಲಾಯಿತು ಎಂದು ಜಿಲ್ಲಾಧ್ಯಕ್ಷ ನುಂಕೇಶ್ ಡೇವಿಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು,

ಜಿಲ್ಲಾ ಅಧ್ಯಕ್ಷರು ಹಾಗೂ ಜಿಲ್ಲಾ ಉಸ್ತುವಾರಿಗಳಾದ ನುಂಕೇಶ್ ಡೇವಿಡ್ ನೇತೃತ್ವದಲ್ಲಿ ಸಾಮಾಜಿಕ ಸೇವೆಗಳ ವಿಭಾಗದ ಅಧ್ಯಕ್ಷರಾಗಿ ಚಿಕ್ಕ ಬಳ್ಳಾರಿ ನಾಗಪ್ಪ, ಸೇವಕರ ವಿಭಾಗದ ಅಧ್ಯಕ್ಷರಾಗಿ ದೇವರಾಜ್ , ಗೌರವಾಧ್ಯಕ್ಷರಾಗಿ ಸುನಿಲ್ ಕುಮಾರ್ , ಯುವ ವಿಭಾಗದ ಅಧ್ಯಕ್ಷರಾಗಿ ಸುನಿಲ್ ಕುಮಾರ್ , ಮಹಿಳಾ ವಿಭಾಗದ ಅಧ್ಯಕ್ಷರಾಗಿ ಶಾಂತಮ್ಮ , ಉಪಾಧ್ಯಕ್ಷರಾಗಿ ಸರಸ್ವತಿ ಮತ್ತು ಕಾರ್ಯದರ್ಶಿಗಳಾಗಿ ರಾಘವೇಂದ್ರ ಸಲಹೆಗಾರರಾಗಿ ಜಯ ಪ್ರಭು, ಮತ್ತು ಇತರರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು ಎಂದು ನುಂಕೇಶ್ ಡೇವಿಡ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಪದಾಧಿಕಾರಿಗಳಾದ ಕಾರ್ಯದರ್ಶಿ ಉಮೇಶರವರು ಬಳ್ಳಾರಿ ಗ್ರಾಮಾಂತರದ ಅಧ್ಯಕ್ಷರಾದ ಹೊನ್ನೂರು ಸ್ವಾಮಿರವರು, ಕಾರ್ಯದರ್ಶಿಗಳಾದ ಸುರೇಶ್ ೦.ಎ.ರವರು, ಸಂಡೂರು ತಾಲೂಕು ಅಧ್ಯಕ್ಷರಾದ ಶೇಖರ್ ಜೀರಿಗಿ ರವರು ಹಾಗೂ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು

# ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಚಿನ್ನಲೇಪಿತ ಡೊನಾಲ್ಡ್ ಟ್ರಂಪ್ ಬೆತ್ತಲೆ ಪ್ರತಿಮೆ ಅನಾವರಣ

### ಅನ್ಯಾಯದ ರಾಜ ಎಂದು ಲೇಬಲ್

**ಯುರೋಪ್:** ಅಮೆರಿಕದ ವಿದೇಶಾಂಗ ಮತ್ತು ಹವಾಮಾನ ನೀತಿಯ ವಿರುದ್ಧ ವಿಡಂಬನಾತ್ಮಕ ಪ್ರತಿಭಟನೆಯಾಗಿ ಸ್ಟ್ರಾಸ್‌ಬರ್ಗ್‌ನಲ್ಲಿರುವ ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ 23 ಕ್ಯಾರೆಟ್ ಚಿನ್ನ ಲೇಪಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದ್ದು, ಪ್ರತಿಮೆಗೆ 'ದಿ ಆರೆಂಜ್ ಪ್ಲೇಗ್' ಎಂದು ಕರೆಯಲಾಗಿದೆ.

ಡ್ಯಾನಿಶ್ ಕಲಾವಿದ ಜೆನ್ಸ್ ಗಾಲ್ಶಿಯೋಟ್ ಅವರು ಈ ಎಂಟು ಅಡಿ ಎತ್ತರದ ಪ್ರತಿಮೆಯನ್ನು ರಚಿಸಿದ್ದು, ಟ್ರಂಪ್ ಒಂದು ಕೈಯಲ್ಲಿ ಗಾಲ್ಫ್ ಕ್ಲಬ್ ಮತ್ತು ವಿಶ್ವ ಆಕಾರದ ಚೆಂಡನ್ನು ಮತ್ತು ಇನ್ನೊಂದು ಕೈಯಲ್ಲಿ ಮಾಪಕಗಳನ್ನು ಹಿಡಿದಿರುವುದನ್ನು ತೋರಿಸುತ್ತದೆ.



ಪ್ರತಿಮೆಯಲ್ಲಿ ಒಬ್ಬ ಚಿಕ್ಕ ವ್ಯಕ್ತಿಯ ಭುಜದ ಮೇಲೆ ಟ್ರಂಪ್ ಕುಳಿತಿದ್ದಾನೆ. ಅದಕ್ಕೆ ಅನ್ಯಾಯದ ರಾಜ ಎಂದು ಲೇಬಲ್ ಮಾಡಲಾಗಿದೆ. ಕೆಳಗೆ ವಿಡಂಬನಾತ್ಮಕವಾಗಿ ಪ್ರತಿಜ್ಞೆಯೊಂದಿದ್ದು, ಅದರಲ್ಲಿ ನಾನು ಒಬ್ಬ ವ್ಯಕ್ತಿಯ ಬೆನ್ನಿನ ಮೇಲೆ ಕುಳಿತಿದ್ದೇನೆ. ಅವನು ನನ್ನ ಹೊರೆಯ ಕೆಳಗೆ ಮುಳುಗುತ್ತಿದ್ದಾನೆ. ನಾನು ಅವನಿಗೆ ಸಹಾಯ ಮಾಡಲು ಏನು ಬೇಕಾದರೂ ಮಾಡುತ್ತೇನೆ. ಅವನ ಬೆನ್ನಿನಿಂದ ಕೆಳಗಿಳಿಯುವುದನ್ನು ಹೊರತುಪಡಿಸಿ ಎಂದು ಬರೆಯಲಾಗಿದೆ. ರಾಜಕೀಯವಾಗಿ ಪ್ರಭಾವಿತ ಶಿಲ್ಪಕೃತಿಗಳಿಗೆ ಹೆಸರುವಾಸಿಯಾಗಿರುವ ಜೆನ್ಸ್ ಗಾಲ್ಶಿಯೋಟ್, ಟ್ರಂಪ್ ಅವರ ಪರಿಸರ ಮತ್ತು ವಿದೇಶಾಂಗ ನೀತಿಗಳಲ್ಲಿನ ಅಸ್ಥಿರತೆಯ ವಿರುದ್ಧ ತಮ್ಮ ಕೃತಿ ವ್ಯಂಗ್ಯಾತ್ಮಕ ಆಕ್ರೋಶದ ಅಭಿವ್ಯಕ್ತಿ ಎಂದು ಬಣ್ಣಿಸಿದ್ದಾರೆ. ಮತ್ತು ನಿಯಮ–ಆಧಾರಿತ ವಿಶ್ವವ್ಯವಸ್ಥೆ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಹವಾಮಾನ ಬಿಕ್ಕಟ್ಟನ್ನು ಪರಿಹರಿಸುವ ನಮ್ಮ ಸಾಮೂಹಿಕ ಪ್ರಯತ್ನಗಳಿಗೆ ಟ್ರಂಪ್ ಅತ್ಯಂತ ದೊಡ್ಡ ಬೆದರಿಕೆಗಳಲ್ಲಿ ಒಂದಾಗಿದ್ದಾರೆ ಎಂದಿದ್ದಾರೆ.

ಡ್ಯಾನಿಶ್ ಯುರೋಪಿಯನ್ ಸಂಸತ್ ಸದಸ್ಯ ಪರ್ ಕ್ಲೌಸೆನ್ ಅವರು, ಈ ಪ್ರತಿಮೆಯ ಅನಾವರಣವನ್ನು ಶ್ಲಾಘಿಸುತ್ತಾ, ಯುರೋಪಿಯನ್ ಸಂಸತ್ತಿನಲ್ಲಿ ಈ ಶಿಲ್ಪವನ್ನು ಪ್ರದರ್ಶಿಸುವುದನ್ನು ಸಹಿಸಿಕೊಳ್ಳಲಾಗದಷ್ಟು ಅಸಹಿಷ್ಣುತೆ ಯಾರಲ್ಲಾದರೂ ಇದ್ದರೆ, ಅವರಿಗೆ ಜಾಗತಿಕ ವೇದಿಕೆಯಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಹೇಳಿದ್ದಾರೆ.

ದಿ ಇಂಡಿಪೆಂಡೆಂಟ್ ಪ್ರಕಾರ, ಟ್ರಂಪ್ ಪ್ರತಿಮೆ ಗುರುವಾರದವರೆಗೆ ಸ್ಟ್ರಾಸ್‌ಬರ್ಗ್‌ನಲ್ಲಿರಲಿದೆ. ನವೆಂಬರ್‌ನಲ್ಲಿ ಟರ್ಕಿಯಲ್ಲಿ ನಡೆಯಲಿರುವ UNCOP31 ಹವಾಮಾನ ಸಮ್ಮೇಳನದಲ್ಲಿ ಇದು ಮತ್ತೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಅಲ್ಲಿ ಗಾಲ್ಶಿಯೋಟ್ ಪ್ರತಿನಿಧಿಗಳಿಗೆ 3D–ಮುದ್ರಿತ ಚಿಕಣಿ ಪ್ರತಿಕೃತಿಗಳನ್ನು ವಿತರಿಸಲು ಯೋಜಿಸಿದ್ದಾರೆ ಎನ್ನಲಾಗಿದೆ.

## ನಂದಿಪುರ ಪುಣ್ಯಕ್ಷೇತ್ರದಲ್ಲಿ ಶರನ್ನವರಾತ್ರಿ ಜ್ಯೋತಿ ದರ್ಶನಕ್ಕೆ ಚಾಲನೆ; ಒಂಬತ್ತು ದಿನಗಳ ಕಾಲ ದೇವಿಯ ವಿವಿಧ ಅವತಾರಗಳ ಆರಾಧನೆ



**ಹೊಸಪೇಟೆ ಧ್ವನಿ ನ್ಯೂಸ್ :**

**ಹಗರಿಬೊಮ್ಮನಹಳ್ಳಿ:** ತಾಲ್ಲೂಕಿನ ಪ್ರಸಿದ್ಧ ಪುಣ್ಯಕ್ಷೇತ್ರ ನಂದಿಪುರ ಮಠದಲ್ಲಿ ದಸರಾ ಶರನ್ನವರಾತ್ರಿ ಅಂಗವಾಗಿ ಶ್ರೀ ರಾಜರಾಜೇಶ್ವರಿ ದೇವಿಯ ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ಪವಿತ್ರ ಜ್ಯೋತಿ ದರ್ಶನ ಕಾರ್ಯಕ್ರಮ ಭಾನುವಾರ ಶ್ರದ್ಧಾಭಕ್ತಿಯಿಂದ ಆರಂಭಗೊಂಡಿತು.

ಮಠದ ಶ್ರೀ ಮಹೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನೂರಾರು ಭಕ್ತರು ಪಾಲ್ಗೊಂಡು ದೇವಿಯ ದರ್ಶನ ಪಡೆದರು.

**ವರ್ಷಕ್ಕೊಮ್ಮೆ ಒಂಬತ್ತು ದಿನ ಜ್ಯೋತಿ ದರ್ಶನ**

ಶಬರಿಮಲೆ ಅಯ್ಯಪ್ಪ ದೇವಸ್ಥಾನದಲ್ಲಿ ಮಕರ ಸಂಕ್ರಾಂತಿಯಂದು ಮಕರಜ್ಯೋತಿ ದರ್ಶನ ಪಡೆಯುವಂತೆ, ನಂದಿಪುರ ಮಠದಲ್ಲಿ ದಸರಾ ಶರನ್ನವರಾತ್ರಿಯ ಒಂಬತ್ತು ದಿನಗಳ ಕಾಲ ವಿಶೇಷ ಜ್ಯೋತಿ ದರ್ಶನದ ಅವಕಾಶವಿದೆ. ಈ ಜ್ಯೋತಿಯನ್ನು ಹಿರಿಯ ಕೌಜಲಗಿ ಮಹಾತಪಸ್ವಿಗಳಾದ ಪರಮಪೂಜ್ಯ ಚರಂತಪ್ಪಜ್ಜನವರು ಮಗುವಾಗಿದ್ದ ಸಂದರ್ಭದಲ್ಲಿ ಆಶೀರ್ವಾದಪೂರ್ವಕವಾಗಿ ನೀಡಿದ್ದರು ಎಂದು ಪೂಜ್ಯರ ಕುಟುಂಬದವರಾದ ಉಪನ್ಯಾಸಕ ಗುರುಬಸವರಾಜ್ ತಿಳಿಸಿದರು.

ಜ್ಯೋತಿಯ ದರ್ಶನ ಪಡೆದರೆ ಭಕ್ತರಿಗೆ ಒಳಿತಾಗುತ್ತದೆ, ಕಷ್ಟಗಳು ಪರಿಹಾರವಾಗಿ ಸುಖ–ಸಮೃದ್ಧಿ ಲಭಿಸುತ್ತದೆ ಎಂಬ ನಂಬಿಕೆ ಇದೆ. ಮುತ್ತೈದೆಯರಿಗೆ ಉಡಿ ತುಂಬಿದರೆ ಇಷ್ಟಾರ್ಥಗಳು ಈಡೇರುತ್ತವೆ, ಯುವತಿಯರಿಗೆ ಕಂಕಣ ಭಾಗ್ಯ ಹಾಗೂ ಸಂತಾನವಿಲ್ಲದವರಿಗೆ ಸಂತಾನ ಭಾಗ್ಯ ಲಭಿಸುತ್ತದೆ ಎಂಬ ಭಕ್ತಿಭಾವದಿಂದ ವಿವಿಧ ಊರುಗಳಿಂದ ಭಕ್ತರು ಆಗಮಿಸುತ್ತಾರೆ.

**ಘಟಸ್ಥಾಪನೆ, ದೇವಿಯ ಆರಾಧನೆ**

ನವರಾತ್ರಿಯ ಮೊದಲ ದಿನ ಭಾನುವಾರ ಬೆಳಿಗ್ಗೆ ಶಾಸ್ತ್ರೋಕ್ತ ಪೂಜಾ ವಿಧಿವಿಧಾನಗಳೊಂದಿಗೆ ಶ್ರೀ ರಾಜರಾಜೇಶ್ವರಿ ದೇವಿಯ ಘಟಸ್ಥಾಪನೆ ನೆರವೇರಿತು. ಶ್ರೀ ಮಹೇಶ್ವರ ಸ್ವಾಮೀಜಿ ಕೇಸರಿ ವಸ್ತ್ರಧಾರಿಯಾಗಿ ದುರ್ಗಾದೇವಿಯ ಮೊದಲ ಅವತಾರವಾದ ಶೈಲಪುತ್ರಿ ದೇವಿಯನ್ನು ಆರಾಧಿಸಿ, ದೇವಿಯ ಪುರಾಣ ಪಾರಾಯಣಕ್ಕೆ ಚಾಲನೆ ನೀಡಿದರು. ಬಳಿಕ ಜ್ಯೋತಿ ದರ್ಶನ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ಮಠಕ್ಕೆ ಆಗಮಿಸಿದ್ದ ನೂರಾರು ಮುತ್ತೈದೆಯರಿಗೆ ಅರಿಷಿಣ–ಕುಂಕುಮ ನೀಡಿ, ಉಡಿ ತುಂಬುವ ಕಾರ್ಯಕ್ರಮ ನಡೆಸಲಾಯಿತು. ನಂತರ ಭಕ್ತರಿಗೆ ಹೋಳಿಗೆ ಮಹಾಪ್ರಸಾದ ವಿತರಿಸಲಾಯಿತು.

ಅ.11 ರಿಂದ ಆರಂಭಗೊಂಡಿರುವ ಧಾರ್ಮಿಕ ಕಾರ್ಯಕ್ರಮಗಳು ಅ.20ರ ಮಹಾನವಮಿವರೆಗೆ ಮುಂದುವರಿಯಲಿವೆ. ಒಂಬತ್ತು ದಿನಗಳ ಕಾಲ ಜಗನ್ಮಾತೆ ಶ್ರೀ ರಾಜರಾಜೇಶ್ವರಿ ದೇವಿಗೆ ವಿವಿಧ ಅವತಾರಗಳ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ನಂದಿಪುರ ಗ್ರಾಮದ ಸ್ತ್ರೀಶಕ್ತಿ ಸಂಘಗಳು ಹಾಗೂ ಸ್ವಸಹಾಯ ಗುಂಪುಗಳ ಮಹಿಳೆಯರು ಒಂಬತ್ತು ದಿನಗಳ ಕಾಲ ಭಕ್ತರಿಗೆ ಹೋಳಿಗೆ ತಯಾರಿಸುವ ಸೇವೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾಸಿಗಿದೇರಿ ಗ್ರಾ.ಪಂ ಮಾಜಿ ಅಧ್ಯಕ್ಷ ಯಮುನಪ್ಪ, ಬನ್ನಿಗೋಳದ ಯಂಕಣ್ಣ, ಉಪನ್ಯಾಸಕ ಗುರುಬಸವರಾಜ್, ಬೆಳಗಾವಿಯ ಪ್ರಬೀಣ ಹುಗ್ಗಿ, ಹಡಗಲಿ ಡಾ. ಜಂಬಣ್ಣ, ಹೊಸಪೇಟೆ ಗೊಗ್ಗ ಗವಿಸಿದ್ದಯ್ಯ, ರಾಣೆಬೆನ್ನೂರಿನ ಕೊಟ್ರೇಶ್, ಬುಕ್ಕಾಂಬೂದಿ ಜಗದೀಶ ಶಿವಸ್ವಾಮಿ, ಡಾ. ಫಣಿಂಗಧರ, ಹಂಪಸಾಗರ ಕೆ. ಕೊಟ್ರೇಶಪ್ಪ, ಬ್ಯಾಲಾಳು ಕರಿಬಸವನಗೌಡ, ಎಚ್.ಎಂ. ಕೊಟ್ರೇಶ್ ಸೇರಿದಂತೆ ಕಂಪ್ಲಿ, ಬಳ್ಳಾರಿ ಹಾಗೂ ವಿವಿಧ ಭಾಗಗಳ ಭಕ್ತರು ಉಪಸ್ಥಿತರಿದ್ದರು.

# ಶೀಘ್ರವೇ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ ಮೆಟ್ರೋ ಸಂಚಾರ

### ಎಲಿವೇಟೆಡ್ ಪಿಂಕ್ ಲೈನ್‌ನಲ್ಲಿ ಸುರಕ್ಷತಾ ತಪಾಸಣೆ ಪೂರ್ಣ

**ಬೆಂಗಳೂರು:** ನಮ್ಮ ಮೆಟ್ರೋದ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿಮೀ ಉದ್ದದ ಎಲಿವೇಟೆಡ್ ಗುಲಾಬಿ ಮಾರ್ಗದಲ್ಲಿ ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತ (ಸಿಎಂಆರ್‌ಎಸ್) ಎ ವೆಂಕಟಸುಬ್ರಮಣಿಯನ್ ಮೂರು ದಿನಗಳ ಸುರಕ್ಷತಾ ತಪಾಸಣೆಯನ್ನು ಪೂರ್ಣಗೊಳಿಸಿದ್ದಾರೆ.

ಈ ಮಾರ್ಗದಲ್ಲಿ ಪ್ರಯಾಣಿಕರಿಗೆ ಸೇವೆಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಈ ಸುರಕ್ಷತಾ ತಪಾಸಣೆಯು ಅಕ್ಟೋಬರ್ 6ರಿಂದ 8ರವರೆಗೆ ನಡೆಯಿತು. ಈ ಮಾರ್ಗವು ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆಪಿ ನಗರ 4ನೇ ಹಂತ, ಜಯದೇವ ಆಸ್ಪತ್ರೆ ಮತ್ತು ತಾವರೆಕೆರೆ ಸೇರಿದಂತೆ ಒಟ್ಟು ಆರು ನಿಲ್ದಾಣಗಳನ್ನು ಒಳಗೊಂಡಿದೆ.



ಅಕ್ಟೋಬರ್ 6ರಂದು ಸಿಎಂಆರ್‌ಎಸ್ ಮತ್ತು ಅವರ ತಂಡವು ಮುಖ್ಯ ಮಾರ್ಗ ಹಾಗೂ ಸಂಬಂಧಿತ ಮೂಲಸೌಕರ್ಯಗಳನ್ನು ಮೋಟಾರ್ ಟ್ರಾಲಿ ಮೂಲಕ ಪರಿಶೀಲಿಸಿತು. ಅಕ್ಟೋಬರ್ 7ರಂದು ಮೋಟಾರ್ ಟ್ರಾಲಿ ತಪಾಸಣೆ ಜೊತೆಗೆ ಕೋತನೂರು ಡಿಪೋದ ಸೌಲಭ್ಯಗಳನ್ನು ಪರಿಶೀಲಿಸಿ, ಮುಖ್ಯ ಮಾರ್ಗದಲ್ಲಿ ಮೆಟ್ರೋ ರೈಲುಗಳ ಪ್ರಾಯೋಗಿಕ ಸಂಚಾರ ಮತ್ತು ವಿವಿಧ ಪರೀಕ್ಷೆಗಳನ್ನು ನಡೆಸಿತು. ಅಕ್ಟೋಬರ್ 8ರಂದು ಬೈಯಪ್ಪನಹಳ್ಳಿಯಲ್ಲಿರುವ ಕಾರ್ಯಾಚರಣೆ ನಿಯಂತ್ರಣ ಕೇಂದ್ರವನ್ನು ಪರಿಶೀಲಿಸುವ ಮೂಲಕ ಮೂರು ದಿನಗಳ ತಪಾಸಣೆಯನ್ನು ಪೂರ್ಣಗೊಳಿಸಲಾಯಿತು. ಬಿಎಂಆರ್‌ಸಿಎಲ್ 2026ರ ಆಗಸ್ಟ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಮಾನದಂಡಗಳ ಸಂಸ್ಥೆಯಿಂದ ವೇಗ ಪ್ರಮಾಣಪತ್ರವನ್ನು ಪಡೆದಿದೆ. ನಂತರ ರೈಲ್ವೆ ಮಂಡಳಿಯಿಂದ ಮೆಟ್ರೋ ರೈಲು ಬೋಗಿಗಳಿಗೆ ತಾತ್ಕಾಲಿಕ ಅನುಮೋದನೆ ಹಾಗೂ ಸಿಗ್ನಲಿಂಗ್ ವ್ಯವಸ್ಥೆಗೆ ಸ್ವತಂತ್ರ ಸುರಕ್ಷತಾ ಮೌಲ್ಯಮಾಪಕರಿಂದ (15ಸಿ) ಸುರಕ್ಷತಾ ಪ್ರಮಾಣೀಕರಣವನ್ನು ಪಡೆಯಲಾಗಿದೆ.

ಸಾರ್ವಜನಿಕರ ಸಂಚಾರಕ್ಕೆ ಈ ಮಾರ್ಗವನ್ನು ಮುಕ್ತಗೊಳಿಸುವ ಮೊದಲು ಸಿಎಂಆರ್‌ಎಸ್ ನಡೆಸುವ ತಪಾಸಣೆಯು ಮುಖ್ಯವಾಗಿದೆ. ತಪಾಸಣೆಯ ಸಂದರ್ಭದಲ್ಲಿ ಸಿಎಂಆರ್‌ಎಸ್ ಸೂಚಿಸಿರುವ ಅಂಶಗಳು ಹಾಗೂ ಷರತ್ತುಗಳನ್ನು ಪಾಲಿಸಿದ ನಂತರವೇ ಪ್ರಯಾಣಿಕರ ಸಂಚಾರಕ್ಕೆ ಅನುಮೋದನೆ ನೀಡಲಾಗುತ್ತದೆ. ಈ ಎಲಿವೇಟೆಡ್ ಗುಲಾಬಿ ಮಾರ್ಗವು ಸಾರ್ವಜನಿಕ ಸೇವೆಗೆ ಮುಕ್ತಗೊಂಡ ನಂತರ,

ನಮ್ಮ ಮೆಟ್ರೋದ ಸದ್ಯದ ಕಾರ್ಯಾಚರಣೆಯಲ್ಲಿರುವ 96.10 ಕಿಮೀ ಮಾರ್ಗದ ಉದ್ದವು 103.6 ಕಿಮೀಗೆ ವಿಸ್ತರಣೆಯಾಗಲಿದೆ. ಇದರಿಂದ ಬನ್ನೇರುಘಟ್ಟ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಮೆಟ್ರೋ ಸಂಪರ್ಕ ಮತ್ತಷ್ಟು ಸುಧಾರಿಸಲಿದ್ದು, ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಹೆಚ್ಚಿನ ಬಲ ದೊರೆಯಲಿದೆ.

# ಸಾಲ ಮಾಡಿಯಾದರೂ ಸಂಕಷ್ಟದಲ್ಲಿರುವ ರೈತರಿಗೆ ನೆರವು ನೀಡುತ್ತೇವೆ: ಡಿಸಿಎಂ

**ಕೊಪ್ಪಳ:** ರಾಜ್ಯದಲ್ಲಿ ಬರ ಪರಿಸ್ಥಿತಿ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದು, ರೈತರು ಬೆಳೆದ ಬೆಳೆ ಸಂಪೂರ್ಣ ನಾಶವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರನ್ನು ಉಳಿಸಿಕೊಳ್ಳುವುದು ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಅಗತ್ಯ ಬಿದ್ದರೆ ಸಾಲ ತಗೊಂಡಾದರೂ ರೈತರಿಗೆ ನೆರವು ನೀಡುತ್ತೇವೆ ಎಂದು ಡಿಸಿಎಂ ಡಾ.ಜಿ.ಪರಮೇಶ್ವರ ಭರವಸೆ ನೀಡಿದರು. ಅವರು ಇಂದು ಯಲಬುರ್ಗಾ ತಾಲೂಕಿನ ಗುನ್ನಾಳ ಗ್ರಾಮದ ರೈತರ ಜಮೀನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಾಲ ಮರುಪಾವತಿಗೆ ಐದು ವರ್ಷಗಳ ಕಾಲಾವಕಾಶ ನೀಡುವ ಕುರಿತು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಈ ಅವಧಿಯಲ್ಲಿ ರೈತರು ಸಾಲ ಮರುಪಾವತಿ ಮಾಡದಿದ್ದರೂ ಪರವಾಗಿಲ್ಲ. ಸಾಲದ ಮೇಲಿನ ಬಡ್ಡಿ ಸೇರಿದಂತೆ ಸಂಬಂಧಿತ ಜವಾಬ್ದಾರಿಗಳನ್ನು ಸರ್ಕಾರವೇ ನೋಡಿಕೊಳ್ಳಲಿದೆ ಎಂದು ಬ್ಯಾಂಕ್‌ಗಳಿಗೆ ತಿಳಿಸಲಾಗಿದೆ ಎಂದರು. ರಾಜ್ಯದ 240 ತಾಲ್ಲೂಕುಗಳ ಪೈಕಿ ಈಗಾಗಲೇ 217 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು, ವಿಜಯಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬರದ ತೀವ್ರತೆ ಮೈಸೂರು ಭಾಗಕ್ಕಿಂತ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿಯ ಮಾನದಂಡದ ಪ್ರಕಾರ ರೈತರಿಗೆ ಒಟ್ಟು 8,500 ರೂ. ಪರಿಹಾರ ದೊರೆಯಬೇಕಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಸೇರಿರುತ್ತದೆ. ರಾಜ್ಯದ ಸುಮಾರು 50 ಲಕ್ಷ ರೈತರಿಗೆ ಪರಿಹಾರ ನೀಡಬೇಕಿದೆ. ಪ್ರತಿ ರೈತರಿಗೆ 2,500 ರೂ.ನೀಡಲು ಸರ್ಕಾರ ಈಗಾಗಲೇ 1,250 ಕೋಟಿ ರೂ. ವೆಚ್ಚ ಮಾಡಿದೆ. ಈ ಮೊತ್ತ ರೈತರ ಸಂಕಷ್ಟಕ್ಕೆ ಸಾಕಾಗುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಮೊದಲ ಕಂತಿನ ಹಣವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಜವಾಬ್ದಾರಿಯ ಭಾಗವಾಗಿದೆ ಎಂದರು.ರಾಜ್ಯದಲ್ಲಿ ಇದುವರೆಗೆ ಸುಮಾರು 46,000 ಕೋಟಿ ರೂ. ಬೆಳೆ ನಷ್ಟ ಸಂಭವಿಸಿರುವ ಬಗ್ಗೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

# ಅಕ್ಕಿ ದರ ಗಗನಕ್ಕೆ;ಬಡ ಮಧ್ಯಮ ವರ್ಗದವರಿಗೆ ಭಾರಿ ಆರ್ಥಿಕ ಹೊಡೆತ

**ಬೆಂಗಳೂರು:** ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರಗಾಲದ ಬಿಸಿ ಇದೀಗ ನೇರವಾಗಿ ಜನರಿಗೆ ತಟ್ಟುತ್ತಿದೆ. ಮುಂಗಾರು ಮಳೆಯ ತೀವ್ರ ಕೊರತೆ ಮತ್ತು ಜಲಾಶಯಗಳು ಬತ್ತಿ ಹೋಗಿರುವುದರಿಂದ ರಾಜ್ಯದಲ್ಲಿ ಅಕ್ಕಿ ಉತ್ಪಾದನೆ ಕುಸಿದಿದ್ದು, ಕಳೆದ ಮೂರು ತಿಂಗಳುಗಳಲ್ಲಿ ಪ್ರಮುಖ ಅಕ್ಕಿ ತಳಿಗಳ ಬೆಲೆ ಪ್ರತಿ ಕೆಜಿಗೆ ರೂ.25 ರಿಂದ ರೂ.30 ರಷ್ಟು ಭಾರಿ ಏರಿಕೆ ಕಂಡಿದೆ.

ದೇಶದ ಪ್ರಮುಖ ಭತ್ತ ಉತ್ಪಾದಕ ರಾಜ್ಯಗಳಲ್ಲೊಂದಾದ ಕರ್ನಾಟಕದಲ್ಲಿ ಈ ಬಾರಿ ಉತ್ಪಾದನೆ ಕುಸಿಯುವ ನಿರೀಕ್ಷೆಯಿದೆ. ಜೂನ್‌ನಲ್ಲಿ ಭತ್ತದ ಬಿತ್ತನೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದ್ದು, ನವೆಂಬರ್‌ನಲ್ಲಿ ಕೊಯ್ಲು ಆರಂಭವಾಗಲಿದೆ. ಹೀಗಾಗಿ ಮುಂಬರುವ ತಿಂಗಳಲ್ಲಿ ಅಕ್ಕಿಯ ಪೂರೈಕೆ ಮತ್ತಷ್ಟು ಬಿಗಿಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ಹಾಗೂ ಉದ್ಯಮ ತಜ್ಞರು ಅಂದಾಜಿಸಿದ್ದಾರೆ.

ತುಂಗಭದ್ರಾ ಮತ್ತು ಕಾವೇರಿ ನದಿ ಜಲಾನಯನ ಪ್ರದೇಶಗಳಲ್ಲಿ ಭತ್ತವನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ. ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಮೈಸೂರು, ಮಂಡ್ಯ ಸೇರಿದಂತೆ ಮಲೆನಾಡಿನ ಕೆಲವು ಭಾಗಗಳಲ್ಲಿ ಭತ್ತದ ಕೃಷಿ ಹೆಚ್ಚಾಗಿದೆ.

ಕರ್ನಾಟಕದಲ್ಲಿ ಸಾಮಾನ್ಯವಾಗಿ ವಾರ್ಷಿಕ ಸುಮಾರು 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ. ಆದರೆ, ಈ ಬಾರಿ ಎರಡೂ ಜಲಾನಯನ ಪ್ರದೇಶಗಳಲ್ಲಿ ತೀವ್ರ ಬರ ಆವರಿಸಿರುವುದರಿಂದ ಭತ್ತದ ಬಿತ್ತನೆ ಪ್ರದೇಶ 4 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ.ಸಗಟು ಮಾರುಕಟ್ಟೆಯಲ್ಲಿ ಸೋನಾ ಮಸೂರಿ ಅಕ್ಕಿಯ ಬೆಲೆ ಕೆಜಿಗೆ ರೂ.50ರಿಂದ ರೂ.75–80ಕ್ಕೆ ಏರಿಕೆಯಾಗಿದೆ. ಇದೇ ರೀತಿ ಕೆಜಿಗೆ ಸುಮಾರು ರೂ.75ರಷ್ಟಿದ್ದ ಕೋಲಂ ಅಕ್ಕಿಯ ಬೆಲೆ ಇದೀಗ ರೂ.100ರ ಸಮೀಪಕ್ಕೆ ತಲುಪಿದೆ.

ಕೃಷಿ ತಂತ್ರಜ್ಞಾನಿಗಳ ಸಂಸ್ಥೆಯ ಅಧ್ಯಕ್ಷ ಹಾಗೂ ರಾಜ್ಯ ಸರ್ಕಾರದ ಮಾಜಿ ಕೃಷಿ ಸಲಹೆಗಾರ ಎ.ಬಿ. ಪಾಟೀಲ್ ಮಾತನಾಡಿ, ಭತ್ತವು ಅತಿ ಹೆಚ್ಚು ನೀರು ಬಳಕೆಯಾಗುವ ಬೆಳೆಗಳಲ್ಲಿ ಒಂದಾಗಿದೆ. ಒಂದು ಕೆಜಿ ಭತ್ತ ಉತ್ಪಾದಿಸಲು 3,500ರಿಂದ 4,000 ಲೀಟರ್‌ವರೆಗೆ ನೀರು ಬೇಕಾಗುತ್ತದೆ. ಅಣೆಕಟ್ಟುಗಳಲ್ಲಿ ನೀರು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾಲುವೆಗಳ ಕೊನೆಯ ಭಾಗದಲ್ಲಿರುವ ರೈತರಿಗೆ ನೀರು ಸಿಗದ ಪರಿಸ್ಥಿತಿ ಎದುರಾಗಲಿದೆ ಎಂದು ಹೇಳಿದರು.

ಇಂತಹ ಸಂದರ್ಭದಲ್ಲಿ ರೈತರು ಭತ್ತದ ಬದಲು ಬೇಳೆಕಾಳು, ಎಣ್ಣೆಕಾಳು ಅಥವಾ ರಾಗಿ ಬೆಳೆಗಳನ್ನು ಬೆಳೆಯುವುದು ಉತ್ತಮ ಎಂದು ಸಲಹೆ ನೀಡಿದರು.

ಕೃಷಿ ಹವಾಮಾನ ತಜ್ಞ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಪ್ರೊ. ಎಂ.ಬಿ. ರಾಜೇಗೌಡ ಅವರು ಮಾತನಾಡಿ, ಕರ್ನಾಟಕದಲ್ಲಿ ಸಾಮಾನ್ಯವಾಗಿ ಜೂನ್–ಜುಲೈನಲ್ಲಿ ಭತ್ತದ ಬಿತ್ತನೆ ನಡೆಯುತ್ತದೆ.

# ಹೊತ್ತಿ ಉರಿದ ಖಾಸಗಿ ಸ್ಲೀಪರ್ ಬಸ್, ಪ್ರಯಾಣಿಕರು ಪಾರು



**ಬೆಂಗಳೂರು:** ಶಿವಮೊಗ್ಗ ಜಿಲ್ಲೆಯ ಆನಂದಪುರ ಸಮೀಪದ ಮುಂಬಾಳು ಗ್ರಾಮದಲ್ಲಿ ಇಂದು ಮುಂಜಾನೆ ಖಾಸಗಿ ಸ್ಲೀಪರ್ ಬಸ್ ಹೊತ್ತಿ ಉರಿದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.ಬೆಂಗಳೂರಿನಿಂದ ಸಾಗರಕ್ಕೆ ತೆರಳುತ್ತಿದ್ದ ಸ್ಲೀಪರ್ ಬಸ್‌ನಲ್ಲಿ ಇಂದು ಮುಂಜಾನೆ 5.45ರ ಸುಮಾರಿಗೆ ಮುಂಬಾಳು ಗ್ರಾಮದ ಬಳಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ನೋಡನೋಡುತ್ತಿದ್ದಂತೆ ಬೆಂಕಿ ಇಡೀ ಬಸ್‌ಗೆ ವ್ಯಾಪಿಸಿ ಸಂಪೂರ್ಣ ಸುಟ್ಟು ಕರಕಲಾಗಿದೆ.

ಬಸ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಚಾಲಕ ಹಾಗೂ ಕ್ಲೀನರ್ ಬಸ್‌ನಲ್ಲಿದ್ದ ಸಾಗರಕ್ಕೆ ತೆರಳುತ್ತಿದ್ದ ಇಬ್ಬರು ಪ್ರಯಾಣಿಕರನ್ನು ತಕ್ಷಣವೇ ಕೆಳಗಿಳಿಸಿದ್ದಾರೆ.ಬಹುತೇಕ ಪ್ರಯಾಣಿಕರು ಶಿವಮೊಗ್ಗ ಹಾಗೂ ಅದರ ಹಿಂದಿನ ನಿಲ್ದಾಣಗಳಲ್ಲೇ ಇಳಿದಿದ್ದರಿಂದ ಬಸ್‌ನಲ್ಲಿ ಸಾಗರಕ್ಕೆ ತೆರಳುತ್ತಿದ್ದ ಇಬ್ಬರು ಪ್ರಯಾಣಿಕರು ಮಾತ್ರ ಇದ್ದರು.

ಸುದ್ದಿ ತಿಳಿದು ಅನಂತಪುರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಪ್ರವೀಣ್ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ವಾಹನಗಳೊಂದಿಗೆ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದ್ದಾರೆ.

ಬಸ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

# ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಮಂಗಳೂರು ಮಹಿಳೆಗೆ ರೂ.2 ಕೋಟಿ ವಂಚನೆ

**ಮಂಗಳೂರು:** ಪೊಲೀಸ್ ಹಾಗೂ ಸಿಬಿಐ ಅಧಿಕಾರಿಗಳೆಂದು ಪರಿಚಯಿಸಿಕೊಂಡ ಅಪರಿಚಿತರು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ 75 ವರ್ಷದ ಮಹಿಳೆಯೊಬ್ಬರಿಗೆ ಬೆದರಿಕೆ ಹಾಕಿ ಹಂತ ಹಂತವಾಗಿ ಒಟ್ಟು ರೂ.2 ಕೋಟಿ ದೋಚಿರುವ ಘಟನೆ ಮಂಗಳೂರಿನಲ್ಲಿ ನಡೆದಿದೆ. ಕಳೆದ ಸೆ. 25ರಂದು ಅಪರಿಚಿತ ವ್ಯಕ್ತಿಯೊಬ್ಬರು ಮಹಿಳೆಗೆ ಕರೆ ಮಾಡಿ, ತಾನು ಮುಂಬೈ ಕೊಲಾಬಾ ಪೊಲೀಸ್ ಅಧಿಕಾರಿ ಸಂದೀಪ್ ರಾವ್ ಎಂದು ಪರಿಚಯಿಸಿಕೊಂಡಿದ್ದಾನೆ.

ಅಂತಾರಾಷ್ಟ್ರೀಯ ಹಣ ಅಕ್ರಮ ವರ್ಗಾವಣೆ ಆರೋಪಿ ನರೇಶ್ ಗೋಯಲ್ ಜತೆ ಹಣ ವರ್ಗಾವಣೆ, ಮಾದಕವಸ್ತು ವ್ಯವಹಾರ ಹಾಗೂ ಮಕ್ಕಳ ಕಳ್ಳಸಾಗಣೆ ಸೇರಿದಂತೆ ಹಲವು ಅಪರಾಧಗಳಲ್ಲಿ ಮಹಿಳೆ ಭಾಗಿಯಾಗಿರುವುದಾಗಿ ಆರೋಪಿಸಿ, ಈ ಕುರಿತು ಪ್ರಕರಣ ದಾಖಲಾಗಿದೆ ಎಂದು ಬೆದರಿಸಿದ್ದಾನೆ.

ಬಳಿಕ ಮತ್ತೊಂದು ಮೊಬೈಲ್ ಸಂಖ್ಯೆಯಿಂದ ವಾಟ್ಸ್‌ಆಪ್ ವಿಡಿಯೊ ಕರೆ ಮಾಡಿದ್ದ ವ್ಯಕ್ತಿಯೊಬ್ಬ, ತಾನು ಸಿಬಿಐ ಅಧಿಕಾರಿ ಸಮಾಧಾನ್ ಪವಾರ್ ಎಂದು ಪರಿಚಯಿಸಿಕೊಂಡಿದ್ದಾನೆ. ಮಹಿಳೆ ಅಂತಾರಾಷ್ಟ್ರೀಯ ಅಪರಾಧದಲ್ಲಿ ಭಾಗಿಯಾಗಿದ್ದು, 'ನ್ಯಾಷನಲ್ ಸೀಕ್ರೆಸಿ ಆಕ್ಟ್' ಪಾಲಿಸಬೇಕು. ತಾವು ಸರ್ವೆಲೆನ್ಸ್‌ನಲ್ಲಿರುವುದರಿಂದ ಈ ವಿಚಾರವನ್ನು ಯಾರಿಗೂ ತಿಳಿಸಬಾರದು ಎಂದು ಬೆದರಿಸಿದ್ದಾನೆ.

ಆಸ್ತಿ ಹಾಗೂ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿ ಎರಡು ದಿನಗಳಲ್ಲಿ ಕ್ಲಿಯರೆನ್ಸ್ ನೀಡುವುದಾಗಿ ನಂಬಿಸಿದ ಆರೋಪಿಗಳು, ಮಹಿಳೆಯಿಂದ ಖಾತೆ ಹಾಗೂ ಆಸ್ತಿ ವಿವರಗಳನ್ನು ಪಡೆದುಕೊಂಡಿದ್ದಾರೆ. ಬಳಿಕ ತಮ್ಮ ಸೂಚನೆಯಂತೆ ನಿರ್ದಿಷ್ಟ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸುವಂತೆ ಸೂಚಿಸಿದ್ದಾರೆ. ಅದರಂತೆ ಮಹಿಳೆ ಸೆ. 25ರಿಂದ ಅ. 5ರವರೆಗೆ ಹಂತ ಹಂತವಾಗಿ ಒಟ್ಟು ರೂ.2 ಕೋಟಿ ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿದ್ದಾರೆ. ಇದರಲ್ಲಿ ರೂ.60 ಲಕ್ಷ ಹಾಗೂ ಅ. 3ರಂದು ರೂ.1.40 ಕೋಟಿ ವರ್ಗಾವಣೆ ಸೇರಿದೆ.

ವಂಚನೆಗೊಳಗಾಗಿರುವುದು ಗೊತ್ತಾದ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದರೆ 'ಗೋಲ್ಡನ್ ಅವರ್'ನಲ್ಲಿ ಹಣವನ್ನು ತಡೆಹಿಡಿಯುವ ಸಾಧ್ಯತೆ ಇರುತ್ತದೆ. ತಡವಾಗಿ ದೂರು ನೀಡಿದರೆ ಹಣವನ್ನು ವಾಪಸ್ ಪಡೆಯುವುದು ಕಷ್ಟವಾಗುತ್ತದೆ ಎಂದು ಪೊಲೀಸರು ಎಚ್ಚರಿಸಿದ್ದಾರೆ. ಘಟನೆ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಸೈಬರ್ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಮಕ್ಕಳಾಗದ ವಿಚಾರಕ್ಕೆ ಗಲಾಟೆ; ಹೆಂಡತಿಯ ಕತ್ತು ಹಿಸುಕಿ ಕೊಲೆಗೈದ ಗಂಡ



**ಕಲಬುರಗಿ:** ಮಕ್ಕಳಾಗದಿದ್ದಕ್ಕೆ ಹಾಗೂ ತವರು ಮನೆಯಿಂದ ಹಣ ತರಲಿಲ್ಲ ಎಂಬ ಕಾರಣಕ್ಕೆ ಜಗಳ ತೆಗೆದು ಪತಿಯೊಬ್ಬ ಹೆಂಡತಿಯ ಕತ್ತು ಹಿಸುಕಿ ಹತ್ಯೆ ಮಾಡಿರುವ ಅಮಾನವೀಯ ಘಟನೆ ಕಲಬುರಗಿ ಜಿಲ್ಲೆಯ ಚಿಂಚೋಳಿ ಪಟ್ಟಣದಲ್ಲಿ ವರದಿಯಾಗಿದೆ.

ಚಿಂಚೋಳಿ ಪಟ್ಟಣದ ಪ್ರಿಯಾಂಕಾ ಹಡಪದ್ (30) ಮೃತಪಟ್ಟ ಮಹಿಳೆ. ವೃತ್ತಿಯಲ್ಲಿ ವಕೀಲನಾಗಿದ್ದ ಸೂರ್ಯಕಾಂತ್ ಎಂಬಾತನೇ ಪತ್ನಿಯನ್ನು ಹತ್ಯೆಗೈದ ಆರೋಪಿಯಾಗಿದ್ದಾನೆ. ಪತ್ನಿಯನ್ನು ಕೊಲೆ ಮಾಡಿದ ಬಳಿಕ ಆತ್ಮಹತ್ಯೆ ಮಾಡಿಕೊಂಡಂತೆ ಬಿಂಬಿಸಲು ಪತಿ ಮುಂದಾಗಿದ್ದ.

ಮಕ್ಕಳಾಗಿಲ್ಲ ಎಂಬ ಕಾರಣಕ್ಕೆ ಹಾಗೂ ತವರಿನಿಂದ ಹಣ ತರುವ ವಿಚಾರಕ್ಕೆ ಸೂರ್ಯಕಾಂತ್ ಪತ್ನಿಗೆ ಕಿರುಕುಳ ನೀಡುತ್ತಿದ್ದ. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದಿದ್ದು, ಈ ವೇಳೆ ಸೂರ್ಯಕಾಂತ್ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಕೊಲೆ ಬಳಿಕ ಪ್ರಕರಣವನ್ನು ಆತ್ಮಹತ್ಯೆ ಎಂದು ಬಿಂಬಿಸಲು ಸೂರ್ಯಕಾಂತ್ ಪ್ರಯತ್ನಿಸಿದ್ದಾನೆ ಎಂದು ಪ್ರಿಯಾಂಕಾ ಕುಟುಂಬಸ್ಥರು ಆರೋಪಿಸಿದ್ದಾರೆ.

ಘಟನೆ ಬಗ್ಗೆ ಮಾಹಿತಿ ತಿಳಿದು ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಪ್ರಿಯಾಂಕಾ ಕುಟುಂಬಸ್ಥರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಸೂರ್ಯಕಾಂತ್‌ನನ್ನು ವಶಕ್ಕೆ ಪಡೆದಿದ್ದಾರೆ.

ಈ ಪ್ರಕರಣದ ಕುರಿತು ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಬೆಂಗಳೂರಲ್ಲಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದ ಆಸ್ತಿಗಳ ಪತ್ತೆಗೆ ಮನೆ-ಮನೆ ಸರ್ವೆಗೆ ನಿರ್ಧಾರ

**ಬೆಂಗಳೂರು:** ನಗರದಲ್ಲಿ ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವ ಆಸ್ತಿಗಳನ್ನು ಪತ್ತೆಹಚ್ಚಲು ಜಿಬಿಎ ಮನೆ-ಮನೆ ಪರಿಶೀಲನೆ ಕಾರ್ಯ ನಡೆಸಲು ತೀರ್ಮಾನಿಸಿದೆ.



ಈ ಕಾರ್ಯಕ್ಕಾಗಿ ಖಾಸಗಿ ಏಜೆನ್ಸಿಯೊಂದನ್ನು ನೇಮಿಸುವ ಪ್ರಸ್ತಾವನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ನಗರದಾದ್ಯಂತ ಆಸ್ತಿ ತೆರಿಗೆ ಪಾವತಿಸುತ್ತಿರುವ ಆಸ್ತಿಗಳ ಸಂಖ್ಯೆ ಮತ್ತು ವಾಸ್ತವಿಕವಾಗಿ ಇರುವ ಆಸ್ತಿಗಳ ಸಂಖ್ಯೆಯ ನಡುವೆ ಭಾರಿ ವ್ಯತ್ಯಾಸ ಕಂಡುಬಂದಿರುವ ಹಿನ್ನೆಲೆಯಲ್ಲಿ ಜಿಬಿಎ ಈ ಕ್ರಮ ಕೈಗೊಂಡಿದೆ. ಪರಿಶೀಲನಾ ಕಾರ್ಯಕ್ಕೆ ಸುಮಾರು 1,585 ಸಿಬ್ಬಂದಿಯನ್ನು ನಿಯೋಜಿಸಲು ಯೋಜಿಸಲಾಗಿದೆ ಎಂದು ಜಿಬಿಎ ವಿಶೇಷ ಆಯುಕ್ತ (ಕಂದಾಯ) ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

2011ರ ಜನಗಣತಿ ಅಂಕಿ-ಅಂಶಗಳ ಪ್ರಕಾರ ನಗರದಲ್ಲಿ ಸುಮಾರು 47 ಲಕ್ಷ ವಾಸದ ಘಟಕಗಳಿದ್ದವು. ಪ್ರಸ್ತುತ ಈ ಸಂಖ್ಯೆ ಮತ್ತಷ್ಟು ಹೆಚ್ಚಿರುವ ಸಾಧ್ಯತೆಯಿದೆ. ಆದರೆ ಜಿಬಿಎ ವ್ಯಾಪ್ತಿಯಲ್ಲಿ ಇದುವರೆಗೆ ಸುಮಾರು 23 ಲಕ್ಷ ಆಸ್ತಿಗಳು ಮಾತ್ರ ಆಸ್ತಿ ತೆರಿಗೆ ಪಾವತಿಸುತ್ತಿವೆ. ಸುಮಾರು 7 ಲಕ್ಷದಿಂದ 10 ಲಕ್ಷ ಆಸ್ತಿಗಳು ತೆರಿಗೆ ಜಾಲದಿಂದ ಹೊರಗಿರಬಹುದು ಎಂದು ನಾವು ಅಂದಾಜಿಸಿದ್ದೇವೆ. ಎಲ್ಲಾ ಆಸ್ತಿಗಳೂ ಸೂಕ್ತವಾಗಿ ತೆರಿಗೆ ಪಾವತಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಮನೆ-ಮನೆಗೆ ತೆರಳಿ ಪರಿಶೀಲನೆ ನಡೆಸುವುದು ಅಗತ್ಯ ಎಂದು ಮೌದ್ಗಿಲ್ ತಿಳಿಸಿದ್ದಾರೆ.

ವಾಣಿಜ್ಯ ಆಸ್ತಿಗಳಲ್ಲೂ ಭಾರೀ ವ್ಯತ್ಯಾಸ:ವಾಣಿಜ್ಯ ಆಸ್ತಿಗಳ ವಿಚಾರದಲ್ಲಂತೂ ತೆರಿಗೆ ವ್ಯಾಪ್ತಿಯಲ್ಲಿರುವ ಮತ್ತು ವಾಸ್ತವಿಕವಾಗಿ ಇರುವ ಆಸ್ತಿಗಳ ನಡುವೆ ಇನ್ನಷ್ಟು ದೊಡ್ಡ ಅಂತರವಿದೆ. ಜನಗಣತಿ ಮಾಹಿತಿಯ ಪ್ರಕಾರ ಬೆಂಗಳೂರಿನಲ್ಲಿ ಸುಮಾರು 6 ಲಕ್ಷ ವಾಣಿಜ್ಯ ಆಸ್ತಿಗಳಿವೆ. ಆದರೆ ಜಿಬಿಎ ದಾಖಲೆಗಳಲ್ಲಿ ಕೇವಲ 1.3 ಲಕ್ಷ ಆಸ್ತಿಗಳನ್ನು ಮಾತ್ರ ವಾಣಿಜ್ಯ ಆಸ್ತಿಗಳಾಗಿ ಘೋಷಿಸಲಾಗಿದೆ.

ಹೀಗಾಗಿ ಮನೆ-ಮನೆಗೆ ನಡೆಯುವ ಪರಿಶೀಲನೆಯಲ್ಲಿ ಆಸ್ತಿ ತೆರಿಗೆ ಪಾವತಿ ಸ್ಥಿತಿಯಷ್ಟೇ ಅಲ್ಲದೆ, ಆಸ್ತಿಯ ವಾಸ್ತವಿಕ ಬಳಕೆ, ತೆರಿಗೆ ಮೌಲ್ಯಮಾಪನ ಹಾಗೂ ದಾಖಲೆಗಳಲ್ಲಿನ ಘೋಷಣೆಗಳನ್ನು ಪರಿಶೀಲಿಸಲಾಗುತ್ತದೆ. ಪರಿಶೀಲನಾ ಸಿಬ್ಬಂದಿ ತೆರಿಗೆ ಕಡಿಮೆ ಮೌಲ್ಯಮಾಪನ ಮಾಡಿರುವ ಆಸ್ತಿಗಳು, ತಪ್ಪು ಮಾಹಿತಿ ನೀಡಿ ತೆರಿಗೆ ಪಾವತಿಸುತ್ತಿರುವವರು ಹಾಗೂ ಬಾಡಿಗೆಗೆ ನೀಡಿದ್ದರೂ ವಾಣಿಜ್ಯ ಬಳಕೆಯಾಗಿ ಘೋಷಿಸದಿರುವ ಆಸ್ತಿಗಳನ್ನು ಗುರುತಿಸಲಿದ್ದಾರೆ.ಪ್ರಸ್ತುತ ತೆರಿಗೆ ಅಧಿಕಾರಿಗಳಿಗೆ ಇಂತಹ ಆಸ್ತಿಗಳನ್ನು ಪರಿಶೀಲಿಸುವ ಅಧಿಕಾರವಿದ್ದರೂ, ಈವರೆಗೆ ನಡೆದ ಪರಿಶೀಲನೆಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚುವರಿ ಆದಾಯ ಸಂಗ್ರಹವಾಗಿಲ್ಲ. ಹೀಗಾಗಿ ಖಾಸಗಿ ಏಜೆನ್ಸಿಯ ಸಿಬ್ಬಂದಿಯನ್ನು ದೊಡ್ಡ ಪ್ರಮಾಣದಲ್ಲಿ ನಿಯೋಜಿಸಿ ವ್ಯವಸ್ಥಿತವಾಗಿ ಸಮೀಕ್ಷೆ ನಡೆಸಲು ಜಿಬಿಎ ಮುಂದಾಗಿದೆ.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಆಸ್ತಿ ತೆರಿಗೆಯಿಂದ ವಾರ್ಷಿಕವಾಗಿ ಸುಮಾರು 5,000 ಕೋಟಿ ಆದಾಯ ಸಂಗ್ರಹವಾಗುತ್ತಿದೆ. ಆದರೆ ನಗರದಲ್ಲಿ ಹೆಚ್ಚುತ್ತಿರುವ ಆಡಳಿತಾತ್ಮಕ ಮತ್ತು ಮೂಲಸೌಕರ್ಯ ವೆಚ್ಚಗಳಿಗೆ ಈ ಆದಾಯ ಸಾಕಾಗುತ್ತಿಲ್ಲ.ನಗರ ಪಾಲಿಕೆಗಳು ಎರಡು ವರ್ಷಗಳ ಹಿಂದಿನ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನೂ ಪಾವತಿಸಲು ಹೆಣಗಾಡುತ್ತಿವೆ.

ಹಣಕಾಸಿನ ಕೊರತೆಯಿಂದ ಹಲವು ನಾಗರಿಕ ಕಾಮಗಾರಿಗಳ ಮೇಲೂ ಪರಿಣಾಮ ಬೀರುತ್ತಿದ್ದು, ರಸ್ತೆ, ಚರಂಡಿ ಸೇರಿದಂತೆ ಮೂಲಸೌಕರ್ಯಗಳ ಗುಣಮಟ್ಟದ ಬಗ್ಗೆ ಸಾರ್ವಜನಿಕರಿಂದ ಅಸಮಾಧಾನ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ಪತ್ತೆಹಚ್ಚಿ ತೆರಿಗೆ ಜಾಲಕ್ಕೆ ಸೇರ್ಪಡೆಗೊಳಿಸುವ ಮೂಲಕ ಜಿಬಿಎ ಆದಾಯ ಹೆಚ್ಚಿಸಿಕೊಳ್ಳಲು ಮುಂದಾಗಿದೆ.

# ಗಾಜಾ ದಾಳಿಗೆ ಮೂರು ವರ್ಷ: ಇಸ್ರೇಲ್‌ನಿಂದ ಮತ್ತೆ ಆಕ್ರಮಣ; ಐವರು ಸಾವು

**ಗಾಜಾ:** ಹಮಾಸ್ ನಡೆಸಿದ ದಾಳಿಯ ಮೂರನೇ ವಾರ್ಷಿಕೋತ್ಸವದ ದಿನವಾದ ಅಕ್ಟೋಬರ್ 7ರಂದು ಇಸ್ರೇಲ್ ಗಾಜಾ ಮೇಲೆ ಹೊಸ ದಾಳಿಗಳನ್ನು ನಡೆಸಿದೆ. ಈ ದಾಳಿಗಳಲ್ಲಿ ಐವರು ಸಾವನ್ನಪ್ಪಿದ್ದಾರೆ. ಮೂರು ವರ್ಷಗಳ ಹಿಂದೆ 'ನೋವಾ' ಸಂಗೀತ ಉತ್ಸವದಲ್ಲಿ ಹತ್ಯೆಗೀಡಾದ 300ಕ್ಕೂ ಹೆಚ್ಚು ಮಂದಿಗೆ ಶ್ರದ್ಧಾಂಜಲಿ ಸಲ್ಲಿಸಲು ಕುಟುಂಬ ಸದಸ್ಯರು ಮುಂಜಾನೆ ಸೇರಿದ್ದಾಗ ಈ ಘಟನೆ ನಡೆದಿದೆ. ಮೃತರಲ್ಲಿ ಒಬ್ಬರನ್ನು ಮೊಹಮ್ಮದ್ ತಮೌಸ್ ಎಂದು ಗಾಜಾದ ನಾಗರಿಕ ರಕ್ಷಣಾ ದಳ ಗುರುತಿಸಿದೆ.



ಈ ಕುರಿತು ಹೇಳಿಕೆ ನೀಡಿರುವ ಪ್ಯಾಲೆಸ್ಟೀನಿಯನ್ ಅಧಿಕಾರಿಗಳು, ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಸಂಘರ್ಷ ಪ್ರಾರಂಭವಾಗಿ ಅಕ್ಟೋಬರ್ 7ರಂದು ಮೂರು ವರ್ಷ. ಇದೇ ದಿನ ಇಸ್ರೇಲ್ ಗಾಜಾ ಮೇಲೆ ಹೊಸ ದಾಳಿಗಳನ್ನು ನಡೆಸಿತು. ಈ ದಾಳಿಗಳಲ್ಲಿ ಐವರು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳ ಹಿಂದೆ 'ನೋವಾ' ಸಂಗೀತ ಉತ್ಸವದಲ್ಲಿ ಹತ್ಯೆಗೀಡಾದ 300ಕ್ಕೂ ಹೆಚ್ಚು ಮಂದಿಗೆ ಶ್ರದ್ಧಾಂಜಲಿ ಸಲ್ಲಿಸಲು ಕುಟುಂಬ ಸದಸ್ಯರು ಮುಂಜಾನೆ ಸೇರಿದ್ದಾಗ ಗಾಜಾ ಪ್ರದೇಶದಲ್ಲಿ ಜೋರಾದ ಸ್ಫೋಟದ ಶಬ್ದಗಳು ಕೇಳಿಬಂದವು. ಇದರ ಬಳಿಕ ಇಸ್ರೇಲಿ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಗಾಜಾ ನಗರದ ಅಲ್-ಶಿಫಾ ಆಸ್ಪತ್ರೆಯು ರಾತ್ರಿಯ ವೇಳೆ ವರದಿ ನೀಡಿತ್ತು.

ಮೃತರಲ್ಲಿ ಒಬ್ಬರಾಗಿರುವ ಮೊಹಮ್ಮದ್ ತಮೌಸ್ ಅವರು ಹಮಾಸ್ ನ ತುರ್ತು ರಕ್ಷಣಾ ಸೇವೆಯಾಗಿ ಕಾರ್ಯನಿರ್ವಹಿಸುವ ಸಂಸ್ಥೆಯ ಸ್ವಯಂಸೇವಕರಾಗಿದ್ದರು ಎಂದು ಗಾಜಾದ ನಾಗರಿಕ ರಕ್ಷಣಾ ದಳ ತಿಳಿಸಿದೆ.

ದಾಳಿಯ ಕುರಿತು ಮಾಹಿತಿ ನೀಡಿರುವ ಇಸ್ರೇಲ್ ಸೇನೆ, ಉತ್ತರ ಗಾಜಾ ಪಟ್ಟಿಯ ಕಮಲ್ ಅಡ್ವಾನ್ ಆಸ್ಪತ್ರೆಯಿಂದ ಹೊರಬಂದಿದ್ದ ಇಬ್ಬರು ಹಮಾಸ್ ಉಗ್ರರನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, ಅವರನ್ನು ಹತ್ಯೆ ಮಾಡಲಾಗಿದೆ. ಮೃತರಲ್ಲಿ ಒಬ್ಬರು ಇಸ್ರೇಲಿ ರಕ್ಷಣಾ ಪಡೆ ಸೈನಿಕರಿಗೆ ಹಾನಿ ಮಾಡುವ ಉದ್ದೇಶದಿಂದ ಹಳದಿ ರೇಖೆ ಪ್ರದೇಶದಲ್ಲಿ ಸ್ಫೋಟಕಗಳನ್ನು ಅಳವಡಿಸಿದ್ದರು. ಗಾಜಾ ಪಟ್ಟಿಯಲ್ಲಿ ಹಮಾಸ್ ಮತ್ತು ಇಸ್ರೇಲ್ ಸೇನೆಯ ನಿಯಂತ್ರಣದಲ್ಲಿರುವ ಪ್ರದೇಶಗಳನ್ನು ಹಳದಿ ರೇಖೆ ಗುರುತಿಸುತ್ತದೆ ಎಂದು ಹೇಳಿದೆ.

ದಾಳಿಯಲ್ಲಿ ಮೃತಪಟ್ಟವರಲ್ಲಿ ಒಬ್ಬರಾದ ಮೊಹಮ್ಮದ್ ತಮೌಸ್, ಹಮಾಸ್‌ನ ಮಿಲಿಟರಿ ವಿಭಾಗದಲ್ಲಿ ಸ್ನೈಪರ್ ಆಗಿದ್ದು, ನಾಗರಿಕ ರಕ್ಷಣಾ ಸಂಸ್ಥೆಗೂ ಸೇವೆ ಸಲ್ಲಿಸುತ್ತಿದ್ದರು.

ಪ್ಯಾಲೆಸ್ಟೀನಿಯನ್ ನ ದಕ್ಷಿಣ ನಗರವಾದ ಖಾನ್ ಯೂನಿಸ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ 60 ವರ್ಷದ ಹಶಾಮ್ ಇಬ್ರಾಹಿಂ ಅಬು ಮುಸ್ತಫಾ ಎಂಬವರು ಮೃತಪಟ್ಟಿದ್ದು, ಇತರ ಹಲವು ಮಂದಿ ಗಾಯಗೊಂಡಿದ್ದಾರೆ. ಖಾನ್ ಯೂನಿಸ್‌ನ ದಕ್ಷಿಣ ಭಾಗದಲ್ಲಿ ನಡೆದ ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಜಿಯಾದ್ ಝುರಾಬ್ ಎಂಬವರು ಮೃತಪಟ್ಟಿದ್ದಾರೆ. ಅಲ್-ಬುರಾಕ್ ಶಿಬಿರದಲ್ಲಿದ್ದ ಡೇರೆಯೊಂದರ ಮೇಲೆ ನಡೆದ ದಾಳಿಯಲ್ಲಿ ಮತ್ತೊರ್ವ ಸಾವನ್ನಪ್ಪಿದ್ದಾನೆ ಎಂದು ಸ್ಥಳೀಯ ಆಸ್ಪತ್ರೆ ಮೂಲಗಳು ತಿಳಿಸಿವೆ.

ಗಾಜಾದಲ್ಲಿ ಯುದ್ಧ ಆರಂಭವಾಗಿ ಮೂರು ವರ್ಷಗಳು ಕಳೆದಿವೆ.

2025ರ ಅಕ್ಟೋಬರ್ ನಲ್ಲಿ ಅಮೆರಿಕದ ಮಧ್ಯಸ್ಥಿಕೆಯ ಬಳಿಕ ಕದನ ವಿರಾಮ ಜಾರಿಗೊಳಿಸಿದ್ದರೂ ಆಗಾಗ್ಗೆ ದಾಳಿಗಳು ನಡೆಯುತ್ತಲೇ ಇದೆ. ಇಸ್ರೇಲ್ ಗಾಜಾ ಪಟ್ಟಿಯನ್ನು ವಾಸಕ್ಕೆ ಯೋಗ್ಯವಲ್ಲದ ಸ್ಥಳವನ್ನಾಗಿ ಮಾಡಿದೆ ಎಂದು ಗಾಜಾ ನಗರದ ನಿವಾಸಿ ಮಹಮೂದ್ ಅಬು ಹಸಿರಾ ಎಂಬವರು ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ.

ಇಸ್ರೇಲ್‌ನ ಮಿಲಿಟರಿ ಕಾರ್ಯಾಚರಣೆಯಿಂದಾಗಿ ಗಾಜಾದ ಬಹುತೇಕ ಜನರನ್ನು ಸ್ಥಳಾಂತರಿಸಲಾಗಿದೆ. 74,200 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಕದನ ವಿರಾಮ ಘೋಷಣೆಯಾದ ಮೇಲೆ ಇಸ್ರೇಲ್ ಪಡೆಗಳು ಗಾಜಾದಲ್ಲಿ 1,460 ಕ್ಕೂ ಹೆಚ್ಚು ಜನರನ್ನು ಕೊಂದಿವೆ ಎಂದು ವಿಶ್ವಸಂಸ್ಥೆಯು ವಿಶ್ವಾಸಾರ್ಹ ಮೂಲ, ಹಮಾಸ್‌ನ ಆಡಳಿತದಲ್ಲಿರುವ ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

## ದಸರಾ ಜಂಬೂ ಸವಾರಿ

# ಧನಂಜಯನ ಹೆಗಲಿಗೆ ಚಿನ್ನದ ಅಂಬಾರಿಯ ಮಹಾ ಜವಾಬ್ದಾರಿಗೆ ಮುಂಚೂಣಿಯಲ್ಲಿ

**ಮೈಸೂರು:** ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಚಿನ್ನದ ಅಂಬಾರಿ ಹೊರುವ ಆನೆ ಯಾವುದು ಎಂಬ ಕುತೂಹಲ ಕಳೆದ ಕೆಲ ದಿನಗಳಿಂದ ದಸರಾ ಅಭಿಮಾನಿಗಳಲ್ಲಿ ಮನೆ ಮಾಡಿದೆ.



ಇದೀಗ ಅಂಬಾರಿ ಹೊರುವ ಜವಾಬ್ದಾರಿಗೆ ಆಯ್ಕೆಯಾಗಿರುವ ನಾಲ್ಕು ಆನೆಗಳ ಪೈಕಿ ಧನಂಜಯ ಮುಂಚೂಣಿಯಲ್ಲಿದ್ದಾನೆ.

ಉಳಿದಂತೆ ಮಹೇಂದ್ರ, ಏಕಲವ್ಯ ಮತ್ತು ಸುಗ್ರೀವ ಆನೆಗಳನ್ನು ಆಯ್ಕೆ ಮಾಡಲಾಗಿದೆ. ಅಂಬಾರಿ ಆನೆ ಹೆಸರನ್ನು ಇನ್ನೆರಡು-ಮೂರು ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷದವರೆಗೆ ಅಂಬಾರಿ ಹೊತ್ತಿದ್ದ ಅಭಿಮನ್ಯುಗೆ ಇದೀಗ 60 ವರ್ಷ ವಯಸ್ಸಾಗಿರುವ ಹಿನ್ನೆಲೆಯಲ್ಲಿ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿ ನೀಡಲಾಗಿದೆ

ಅರಣ್ಯ ಇಲಾಖೆ ಧನಂಜಯ, ಮಹೇಂದ್ರ, ಪ್ರಶಾಂತ, ಏಕಲವ್ಯ ಮತ್ತು ಸುಗ್ರೀವ ಆನೆಗಳಿಗೆ ಅಂಬಾರಿ ಕರ್ತವ್ಯಕ್ಕಾಗಿ ತರಬೇತಿ ನೀಡುತ್ತಿದೆ.

ಜಂಬೂ ಸವಾರಿಯ ವೇಳೆ ಜನಸಂದಣಿ, ಜೋರಾದ ಶಬ್ದ, ನಿರಂತರ ಚಲನೆ ಹಾಗೂ ಒಟ್ಟಾರೆ ವಾತಾವರಣವನ್ನು ಆನೆಗಳು ಹೇಗೆ ನಿಭಾಯಿಸುತ್ತವೆ ಎಂಬುದನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ಆನೆಗಳ ದೈಹಿಕ ಸಾಮರ್ಥ್ಯ, ಸ್ಥಿರತೆ, ನಡಿಗೆ, ಸ್ವಭಾವ, ಸಹನಶಕ್ತಿ ಹಾಗೂ ತರಬೇತಿ ವೇಳೆ ನೀಡುವ ಪ್ರದರ್ಶನ ಸೇರಿದಂತೆ ವಿವಿಧ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತಿದೆ. ಮರದ ಅಂಬಾರಿ ಹಾಗೂ ಮರಳು ಚೀಲಗಳನ್ನು ಹೊರುವ ತರಬೇತಿಯನ್ನೂ ಆನೆಗಳಿಗೆ ನೀಡಲಾಗುತ್ತಿದೆ.

ಧನಂಜಯ ಈ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾನೆ. ಆದರೆ, ಆತನಲ್ಲಿ ಮದದ ಲಕ್ಷಣಗಳು ಕಾಣಿಸಿಕೊಂಡಿದ್ದು, ಮೆರವಣಿಗೆ ವೇಳೆ ಇದರಿಂದ ಕಿರಿಕಿರಿ ಅಥವಾ ಆಕ್ರಮಣಕಾರಿ ವರ್ತನೆ ತೋರುವ ಸಾಧ್ಯತೆ ಇದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಅಂಬಾರಿ ಹೊರುವ ಜವಾಬ್ದಾರಿಗೆ ಧನಂಜಯ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಹೇಳಿದ್ದಾರೆ.

ಇತ್ತೀಚೆಗೆ ನಡೆದ ಸಭೆಯಲ್ಲಿ ಆರಂಭದಲ್ಲಿ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅವರು ಹೇಳಿದ್ದರು. ಬಳಿಕ "ಬಹುತೇಕ ಧನಂಜಯ" ಎಂದು ಪ್ರತಿಕ್ರಿಯಿಸಿದ್ದರು. ಸಚಿವರ ಈ ಹೇಳಿಕೆ ಸಾಮಾಜಿಕ ಮಾಧ್ಯಮಗಳಲ್ಲಿ ಹಾಗೂ ದಸರಾ ಅಭಿಮಾನಿಗಳ ನಡುವೆ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಇದೇ ವೇಳೆ ಮಹೇಂದ್ರ ಆನೆಯ ಆಯ್ಕೆ ಬಗ್ಗೆಯೂ ಪ್ರಶ್ನೆಗಳು ನಡೆಯುತ್ತಿವೆ. ಮಳೆಯ ಕಾರಣದಿಂದ ಮಹೇಂದ್ರನಿಗೆ ಮರದ ಅಂಬಾರಿ ಹೊರುವ ತರಬೇತಿಯನ್ನು ಮಧ್ಯದಲ್ಲೇ ಸ್ಥಗಿತಗೊಳಿಸಲಾಗಿತ್ತು.

# ತಾಪಂ, ಜಿಪಂ ಎಲೆಕ್ಷನ್‌ಗೆ ಸಿದ್ಧತೆ ಆರಂಭ

## ಮೀಸಲು ಪಟ್ಟಿ ಪ್ರಕಟ: ಮಹಿಳೆಯರಿಗೆ ಹೆಚ್ಚು ಸೀಟು

**ಬೆಂಗಳೂರು:** ರಾಜ್ಯದಲ್ಲಿ ಬಹುದಿನಗಳಿಂದ ಬಾಕಿ ಉಳಿದಿರುವ ತಾಲೂಕು ಪಂಚಾಯಿತಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆ ನಡೆದಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ರಾಜ್ಯದ ಎಲ್ಲಾ 31 ಜಿಲ್ಲೆಗಳ ತಾಲೂಕು ಪಂಚಾಯಿತಿಗಳ ಸದಸ್ಯ ಸ್ಥಾನಗಳ ಮೀಸಲು ಪಟ್ಟಿಯನ್ನು ಪ್ರಕಟಿಸಿದೆ.



ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 123ರಡಿ ಸರಕಾರವು ಈ ಅಧಿಸೂಚನೆಯನ್ನು ಹೊರಡಿಸಿದೆ. ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಗಳನ್ನು ರದ್ದುಪಡಿಸಿ, ಹೊಸದಾಗಿ ಪ್ರವರ್ಗವಾರು ಮತ್ತು ಮಹಿಳಾ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ.

ರಾಜ್ಯದ 31 ಜಿಲ್ಲೆಗಳ ಎಲ್ಲಾ ತಾಲೂಕು ಪಂಚಾಯಿತಿಗಳಿಂದ ಒಟ್ಟು 3656 ಸ್ಥಾನಗಳಿವೆ. ಒಟ್ಟು 3656 ಸ್ಥಾನಗಳ ಪೈಕಿ ಅರ್ಧಕ್ಕಿಂತ ಹೆಚ್ಚು, ಅಂದರೆ 1905 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿವೆ. ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ಕೊನೆಗೂ ರಾಜ್ಯ ಸರಕಾರ ಮುಂದಾ ಗಿದ್ದು, ಇದಕ್ಕೆ ಪೂರ್ವ ಸಿದ್ಧತೆಗಳನ್ನು ಸಹ ಮಾಡಿಕೊಳ್ಳುತ್ತಿದೆ.

ಇದಕ್ಕೆ ಪೂರಕವೆಂಬಂತೆ ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ನ ವರ್ಗವಾರು ಮೀಸಲಿರಿಸಿದ ಸ್ಥಾನಗಳ ಅಧಿಸೂಚನೆ ಪ್ರಕಟಿಸಿದೆ.

ರಾಜ್ಯದಲ್ಲಿ ಒಟ್ಟು 1129 ಜಿಲ್ಲಾ ಪಂಚಾಯಿತಿ ಸ್ಥಾನಗಳಿದ್ದು, ಈ ಪೈಕಿ ಪರಿಶಿಷ್ಟ ಜಾತಿ 225, ಪರಿಶಿಷ್ಟ ಪಂಗಡಕ್ಕೆ 102 ಸ್ಥಾನ ಮೀಸಲು ಸ್ಥಾನಗಳಿವೆ. ಇನ್ನು ಹಿಂದುಳಿದ ವರ್ಗ ಎಲ್ಲಾ 183, ಹಿಂದುಳಿದ ವರ್ಗ ಬಿ 43 ಸ್ಥಾನ ಸಾಮಾನ್ಯ ವರ್ಗಕ್ಕೆ 576 ಸ್ಥಾನ ಮೀಸಲಿವೆ. ಇದರಲ್ಲಿ ಇದೀಗ ರಾಜ್ಯ ಸರಕಾರ ವರ್ಗವಾರು ಮೀಸಲು ಪ್ರಕಟಣೆ ಹೊರಡಿಸಿದೆ.

ಈ ಬಗ್ಗೆ ಚಿಕ್ಕಮಗಳೂರಿನಲ್ಲಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ, ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲು ಪೂರ್ಣಗೊಂಡಿದ್ದು, ಪ್ರಾಥಮಿಕ ಕರಡು ಅಧಿಸೂಚನೆ ಹೊರ ಬೀಳಲಿದೆ. ನಮ್ಮ ಸರಕಾರ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಬದ್ಧವಾಗಿದ್ದು, ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ

ಪ್ರಾಥಮಿಕ ಕರಡು ಅಧಿಸೂಚನೆ ಹೊರಡಿಸಿದ ತರುವಾಯ ಆಕ್ಷೇಪಣೆ ಸಲ್ಲಿಕೆಗೆ 10 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಚುನಾವಣೆ ನಡೆಸುವ ಜವಾಬ್ದಾರಿ ಆಯೋಗ ನಿರ್ವಹಿಸುತ್ತದೆ ಎಂದರು.

# SIR ಮೂಲಕ ಅಹಿಂದ ಮತದಾರರ ಹೆಸರು ಕಡಿತ ಆರೋಪ: ದೆಹಲಿಯಲ್ಲಿ ಬಿ. ನಾಗೇಂದ್ರ ಆಕ್ರೋಶ



**ಹೊಸಪೇಟೆ ಧ್ವನಿ ನ್ಯೂಸ್ :**
**ಬಳ್ಳಾರಿ :** ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ, ದೆಹಲಿಯಲ್ಲಿ ಕಾಂಗ್ರೆಸ್ ಹಾಗೂ ಇಂಡಿಯಾ ಮೈತ್ರಿಕೂಟದ ಪಕ್ಷಗಳು ಹಮ್ಮಿಕೊಂಡಿದ್ದ ಸುಪ್ರೀಂಕೋರ್ಟ್ ಚಲೋ ಮತ್ತು ದೆಹಲಿ ಚಲೋ ಬೃಹತ್ ಪ್ರತಿಭಟನೆಯಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಬಿ. ನಾಗೇಂದ್ರ ಅವರು ಪಾಲ್ಗೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಬಿ. ನಾಗೇಂದ್ರ ಅವರು, ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (SIR) ಪ್ರಕ್ರಿಯೆಯ ಮೂಲಕ ಕರ್ನಾಟಕದಲ್ಲಿ ಅಹಿಂದ ವರ್ಗಗಳಿಗೆ ಸೇರಿದ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕಡಿತಗೊಳಿಸಲಾಗಿದೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು.
ಚುನಾವಣಾ ಆಯೋಗವನ್ನು ಬಳಸಿಕೊಂಡು ಬಿಜೆಪಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ಅವರು, ಮತದಾರರ ಹಕ್ಕುಗಳನ್ನು ರಕ್ಷಿಸಬೇಕು ಹಾಗೂ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ

# 2008ರಿಂದಲೂ ನೈಸ್ ಅಕ್ರಮ ಟೋಲ್ ವಸೂಲಿ: ಹೆಚ್‌ಡಿಕೆ ಆರೋಪ

**ಬೆಂಗಳೂರು:** ಕಳೆದ 2008 ರಿಂದಲೂ ನೈಸ್ ರಸ್ತೆಯ ಟೋಲ್ ಸಂಗ್ರಹ ಕಾನೂನುಬಾಹಿರವಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.ಜೆಪಿ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಎಂಐಸಿಪಿ ಯೋಜನೆ ರಾಜ್ಯ ಸರ್ಕಾರ ಹಾಗೂ ನೈಸ್ ಸಂಸ್ಥೆ ನಡುವೆ ಆಗಿರುವ ಒಪ್ಪಂದಗಳ ದಾಖಲೆಗಳನ್ನು ಪ್ರದರ್ಶಿಸಿ ಅವರು ಈ ಆರೋಪ ಮಾಡಿದರು.

2008-09ರಲ್ಲಿ 5 ಕೋಟಿ ರೂ. ಇದ್ದ ನೈಸ್ ರಸ್ತೆ ಟೋಲ್ ಸಂಗ್ರಹವು 2024-025ರ ವೇಳೆಗೆ 734 ಕೋಟಿ ರೂ.ಗೆ ಏರಿಕೆಯಾಗಿದೆ. ಇದುವರೆಗೆ ಒಟ್ಟಾರೆ 4758 ಕೋಟಿ ರೂ. ಟೋಲ್ ಸಂಗ್ರಹಿಸಲಾಗಿದೆ ಎಂದು ದೂರಿದರು.

ಬಿಎಂಐಸಿಪಿ ಮೂಲ ಒಪ್ಪಂದದಂತೆ ಯೋಜನೆಯನ್ನು ಪೂರ್ಣಗೊಳಿಸದೇ ಹಣ ಗಳಿಸುವ ದಂಧೆಯನ್ನಾಗಿ ಮಾಡಿಕೊಳ್ಳಲಾಗಿದೆ. ಮೂಲ ಒಪ್ಪಂದವನ್ನು ಉಲ್ಲಂಘಿಸಲಾಗಿದೆ.

# ಭಾರತದಲ್ಲಿ ಸ್ಟಾರ್‌ಲಿಂಕ್‌ಗೆ 'ಉದ್ಯಮಿ'ಗಳು ಅಡ್ಡಿಪಡಿಸುತ್ತಿದ್ದಾರೆ ಎಂಬ ಮಸ್ಕ್ ಹೇಳಿಕೆ ಆಧಾರರಹಿತ ಎಂದ ಕೇಂದ್ರ

**ನವದೆಹಲಿ:** ಭಾರತದಲ್ಲಿ ತಮ್ಮ ಉಪಗ್ರಹ ಇಂಟರ್ನೆಟ್ ಯೋಜನೆ 'ಸ್ಟಾರ್ಲಿಂಕ್'ಗೆ



ಕೆಲವು ಉದ್ಯಮಿಗಳು ಅಡ್ಡಿಪಡಿಸುತ್ತಿದ್ದಾರೆ ಎಂಬ ತಂತ್ರಜ್ಞಾನ ಉದ್ಯಮಿ ಎಲಾನ್ ಮಸ್ಕ್ ಅವರ ಆರೋಪವನ್ನು ಕೇಂದ್ರ ಸರ್ಕಾರ ತೀವ್ರವಾಗಿ ನಿರಾಕರಿಸಿದೆ. ಮಸ್ಕ್ ಅವರ ಹೇಳಿಕೆಗಳು ಸಂಪೂರ್ಣವಾಗಿ ಆಧಾರರಹಿತವಾಗಿದ್ದು, ತಪ್ಪು ಕಲ್ಪನೆಗಳಿಂದ ಕೂಡಿವೆ ಎಂದು ಕೇಂದ್ರ ಸಂವಹನ ಸಚಿವಾಲಯ ಸ್ಪಷ್ಟಪಡಿಸಿದೆ.

ಎಲಾನ್ ಮಸ್ಕ್ ಅವರ ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳುವ 'ಡಾಡ್ಜ್ ಡಿಸೈನರ್' ಎಂಬ ಎಕ್ಸ್ ಖಾತೆಯು ಭಾರತದ ಗ್ರಾಮೀಣ ಸಂಪರ್ಕದ ಕುರಿತು ಪೋಸ್ಟ್ ಮಾಡಿತ್ತು. ಭಾರತದ 11,256ಕ್ಕೂ ಹೆಚ್ಚು ಗ್ರಾಮಗಳಲ್ಲಿ ಇನ್ನೂ ಸೂಕ್ತ 4ಜಿ ಸಂಪರ್ಕವಿಲ್ಲ ಹಾಗೂ ಭಾರತ್‌ನೆಟ್ ಯೋಜನೆಯ ಮೂಲಸೌಕರ್ಯ ಪೂರ್ಣ ಪ್ರಮಾಣದಲ್ಲಿ ತಲುಪಿಲ್ಲ ಎಂದು ಉಲ್ಲೇಖಿಸಿ, ಭಾರತಕ್ಕೆ ಸ್ಟಾರ್ಲಿಂಕ್ ಸೇವೆಯ ಅಗತ್ಯವಿದೆ ಎಂದು ಅದರಲ್ಲಿ ಹೇಳಲಾಗಿತ್ತು.ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದ ಮಸ್ಕ್, 'ದುರದೃಷ್ಟವಶಾತ್, ಭಾರತೀಯ ಜನರ ಮೇಲೆ ತಮ್ಮ ಏಕಸ್ವಾಮ್ಯದ ಹಿಡಿತವನ್ನು ಕಾಯ್ದುಕೊಳ್ಳಲು ಕೆಲವು ಒಲಿಗಾರ್ಚ್‌ಗಳು ನಮ್ಮನ್ನು ನಿರ್ಬಂಧಿಸುತ್ತಿದ್ದಾರೆ. ಅವರು ಯಾರೆಂದು ನೀವು ಊಹಿಸಬಹುದು. ಇದು ಭಾರತದ ಜನರ ವಿರುದ್ಧದ ಅಪರಾಧ' ಎಂದು ಹೇಳಿದ್ದರು. ಈ ಮೂಲಕ ಭಾರತದ ಪ್ರಮುಖ ಟೆಲಿಕಾಂ ಸಂಸ್ಥೆಗಳ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದರು.

ಮಸ್ಕ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಂವಹನ ಸಚಿವಾಲಯ, ಭಾರತವು ಉಪಗ್ರಹ ಸಂವಹನ ಸೇರಿದಂತೆ ಎಲ್ಲ ದೂರಸಂಪರ್ಕ ಸೇವೆಗಳಿಗೆ ನ್ಯಾಯಯುತ, ಪಾರದರ್ಶಕ ಮತ್ತು ತಾರತಮ್ಯವಿಲ್ಲದ ನಿಯಂತ್ರಣ ಚೌಕಟ್ಟನ್ನು ಜಾರಿಗೆ ತಂದಿದೆ ಎಂದು ತಿಳಿಸಿದೆ.

# ಹಳ್ಳಿಗಳಲ್ಲಿ ಗರಿಗೆದರಿದ ರಾಜಕೀಯ

(1ನೇ ಪುಟದಿಂದ)

**ಹರಪನಹಳ್ಳಿ ತಾ.ಪಂ - ಒಟ್ಟು 22 ಕ್ಷೇತ್ರಗಳು**

1) ಚಿಗಟೇರಿ - ಸಾಮಾನ್ಯ (ಮಹಿಳೆ), 2) ಸಾಸ್ವಿಹಳ್ಳಿ - ಸಾಮಾನ್ಯ (ಮಹಿಳೆ), 3) ಮತ್ತಿಹಳ್ಳಿ - ಸಾಮಾನ್ಯ (ಮಹಿಳೆ), 4) ಅರಸೀಕೆರೆ - ಪ.ಪಂಗಡ, 5) ನೀಚ್ಚವನಹಳ್ಳಿ - ಪ.ಪಂಗಡ (ಮಹಿಳೆ), 6) ಆಣಜಗೆರೆ - ಪ.ಜಾತಿ (ಮಹಿಳೆ), 7) ಉಚ್ಚಂಗಿದುರ್ಗ - ಪ.ಪಂಗಡ, 8) ಪುಣಬಗಟ್ಟ - ಸಾಮಾನ್ಯ, 9) ಕಂಚಿಕೆರೆ - ಸಾಮಾನ್ಯ, 10) ತೌಡೂರು - ಪ.ಜಾತಿ, 11) ಹಿರೇಮೇಗಳಗೆರೆ - ಸಾಮಾನ್ಯ, 12) ತೆಲಿಗಿ - ಪ.ಪಂಗಡ (ಮಹಿಳೆ), 13) ದುಗ್ಗಾವತಿ - ಸಾಮಾನ್ಯ, 14) ರಾಗಿಮಸಲವಾಡ - ಪ.ಜಾತಿ, 15) ನೀಲಗುಂದ - ಸಾಮಾನ್ಯ (ಮಹಿಳೆ), 16) ತೊಗರಿಕಟ್ಟೆ - ಪ.ಜಾತಿ (ಮಹಿಳೆ), 17) ಹಾರಕನಾಳು - ಪ.ಜಾತಿ, 18) ಬಾಗಳಿ - ಸಾಮಾನ್ಯ, 19) ನಂದಿಬೇವೂರು - ಪ.ಜಾತಿ (ಮಹಿಳೆ), 20) ಹಲವಾಗಲು - ಹಿಂದುಳಿದ ವರ್ಗ-ಅ (ಮಹಿಳೆ), 21) ಕುಂಚೂರು - ಸಾಮಾನ್ಯ, 22) ನಿಟ್ಟೂರು - ಸಾಮಾನ್ಯ (ಮಹಿಳೆ)

ಹಗರಿಬೊಮ್ಮನಹಳ್ಳಿ ತಾ.ಪಂ - ಒಟ್ಟು 15 ಕ್ಷೇತ್ರಗಳು

1) ಮೋರಗೇರಿ - ಹಿಂದುಳಿದ ವರ್ಗ-ಅ (ಮಹಿಳೆ), 2) ಬನ್ನಿಕಲ್ಲು - ಸಾಮಾನ್ಯ (ಮಹಿಳೆ), 3) ಹಂಪಸಾಗರ - ಸಾಮಾನ್ಯ, 4) ತಂಬ್ರಹಳ್ಳಿ - ಸಾಮಾನ್ಯ, 5) ಬಸರಕೋಡು - ಪ.ಜಾತಿ (ಮಹಿಳೆ), 6) ಬಾಚಿಗೊಂಡನಹಳ್ಳಿ - ಸಾಮಾನ್ಯ (ಮಹಿಳೆ), 7) ಬ್ಯಾಸಿಗಿದೇರಿ - ಸಾಮಾನ್ಯ (ಮಹಿಳೆ), 8) ಮರಬ್ಬಿಹಾಳ್ - ಪ.ಜಾತಿ, 9) ಹಂಪಾಪಟ್ಟಣ - ಸಾಮಾನ್ಯ (ಮಹಿಳೆ), 10) ಕಡಲಬಾಳು - ಪ.ಪಂಗಡ (ಮಹಿಳೆ), 11) ಹಲಗಾಪುರ - ಪ.ಜಾತಿ (ಮಹಿಳೆ), 12) ದಶಮಾಪುರ - ಪ.ಪಂಗಡ, 13) ಹನಸಿ - ಸಾಮಾನ್ಯ, 14) ಮಾಲವಿ - ಪ.ಜಾತಿ, 15) ನೆಲ್ಕುದ್ರಿ - ಸಾಮಾನ್ಯ. ಕ್ಷೇತ್ರ ಮೀಸಲಾಗಿದೆ.

# ಬೆಳ್ಳಗಟ್ಟ ಗ್ರಾಮದಲ್ಲಿ ಆಂಬುಲೆನ್ಸ್ ಇದ್ದರೂ ಜನರ ಸೇವೆಗೆ ಭಾಗ್ಯವಿಲ್ಲ!

## ತುರ್ತು ಸಂದರ್ಭದಲ್ಲಿ ವಾಹನ ಬಳಕೆಗೆ ಸಿಗದೆ ಗ್ರಾಮಸ್ಥರ ಪರದಾಟ ? ಅಧಿಕಾರಿಗಳ ಹಾಗೂ ಜನಪ್ರತಿನಿದಿನಗಳ ನಿರ್ಲಕ್ಷ್ಯಕ್ಕೆ ಆಕ್ರೋಶ

**ಹೊಸಪೇಟೆ ಧ್ವನಿ ನ್ಯೂಸ್ :**

**ಕೂಡ್ಲಿಗಿ :** ಕ್ಷೇತ್ರದ ಶಾಸಕರಾದ ಡಾ. ಎನ್. ಟಿ. ಶ್ರೀನಿವಾಸ್ ರವರ ತವರು ಪಂಚಾಯಿತಿಯ ವ್ಯಾಪ್ತಿಗೆ ಬರುವ ತಾಲ್ಲೂಕಿನ ಬೆಳ್ಳಗಟ್ಟ ಗ್ರಾಮದಲ್ಲಿ ಆಂಬುಲೆನ್ಸ್ ವಾಹನ ಇದ್ದರೂ,ಆಂಬುಲೆನ್ಸ್ ಗೆ ಚಾಲಕನಿಲ್ಲದೆ ತುರ್ತು ಸಂದರ್ಭಗಳಲ್ಲಿ ಅದು ಜನರ ಸೇವೆಗೆ ಲಭ್ಯವಾಗದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಅನಾರೋಗ್ಯ, ಅಪಘಾತ ಸೇರಿದಂತೆ ತುರ್ತು ಪರಿಸ್ಥಿತಿಗಳಲ್ಲಿ ಆಸ್ಪತ್ರೆಗೆ ತೆರಳಲು ಬಡ ಹಾಗೂ ಗ್ರಾಮೀಣ ಜನರು ಅನತಿ ದೂರದಲ್ಲಿರುವ ಗುಡೇ-ಕೋಟೆ ಹಾಗೂ ಚಿಕ್ಕ ಜೋಗಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆಂಬುಲೆನ್ಸ್ ಗಳನ್ನೇ ಅವಲಂಬಿಸಬೇಕಾಗಿದೆ. ಒಂದು ವೇಳೆ ಈ ಎರಡು ಅರೋಗ್ಯ ಕೇಂದ್ರಗಳ ಆಂಬುಲೆನ್ಸ್ ಗಳು ಹಲವು ಕಾರಣದಿಂದ ಕೈಗೆಟುಕದೆ ಹೋದರೆ ಗ್ರಾಮದ ಜನತೆಯ ಪರಿಸ್ಥಿತಿ ಅದೋಗತಿ.




ಹಲವಾರು ಬಾರಿ ಜಿಲ್ಲಾ ಆರೋಗ್ಯ ಅಧಿಕಾರಿಗಳ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಗಮನಕ್ಕೆ ತಂದರೂ, ಯಾವುದೇ ಪ್ರಯೋಜನವಾಗದಿರುವುದು ಈ ಗ್ರಾಮದ ಜನತೆಯ ದೌರ್ಭಾಗ್ಯವೇ ಸರಿ.

ಸರ್ಕಾರ ಸಾರ್ವಜನಿಕರ ಅನುಕೂಲಕ್ಕಾಗಿ ಒದಗಿಸಿರುವ ಆಂಬುಲೆನ್ಸ್ ಸದಾ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು. ವಾಹನದ ನಿರ್ವಹಣೆ, ಚಾಲಕ ಹಾಗೂ ಸೇವಾ ವ್ಯವಸ್ಥೆಯನ್ನು ಸಮರ್ಪಕವಾಗಿ ಕಲ್ಪಿಸಿ, ತುರ್ತು ಸಂದರ್ಭದಲ್ಲಿ ಯಾವುದೇ ವಿಳಂಬವಿಲ್ಲದೆ ಸಾರ್ವಜನಿಕರಿಗೆ ಸೇವೆ ದೊರೆಯುವಂತೆ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.ಬೆಳ್ಳಗಟ್ಟ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್ ಸೌಲಭ್ಯ ದೊರಕಿ 3 ವರ್ಷಗಳಾದರೂ, ಆಂಬುಲೆನ್ಸ್ ಗೆ ಚಾಲಕನ ನೇಮಕವಿಲ್ಲದೆ, ತುಕ್ಕು ಹಿಡಿದು ಕೊಳೆಯುತ್ತಾ ನಿಂತಿದೆ. ಸ್ವತಃ ವೈದ್ಯರು ಹಾಗೂ ಕ್ಷೇತ್ರದ ಶಾಸಕರಾದ ಡಾ. ಎನ್. ಟಿ. ಶ್ರೀನಿವಾಸ್ ರವರ ತವರು ಪಂಚಾಯಿತಿಯ ಗ್ರಾಮದಲ್ಲಿ ಈ ರೀತಿ ಪರಿಸ್ಥಿತಿ ಉಲ್ಬಣಿಸಿದ್ದರೂ, ಯಾವುದೇ ಕ್ರಮಕ್ಕೆ ಮುಂದಾಗದಿರುವುದು ಇಲ್ಲಿನ ಮುಗ್ಧ ಜನತೆಯ ನೋವಿನ ಸಂಗತಿಯೇ ಸರಿ !"ಆಂಬುಲೆನ್ಸ್ ಕಣ್ಣೆದುರಿಗಿದ್ದರೂ, ಅಗತ್ಯದ ಸಮಯದಲ್ಲಿ ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ ಅದರ ಪ್ರಯೋಜನವೇನು?" ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ.






ಕೂಡ್ಲಿಗಿ ತಾಲೂಕಿನ ಬೆಳ್ಳಗಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಬುಲೆನ್ಸ್ ಚಾಲಕ ಇಲ್ಲದಿರುವುದು ಗಮನಕ್ಕೆ ಬಂದಿದೆ. ಈ ಚುನಾವಣಾ ನೀತಿ ಸಂಹಿತೆ ಮುಗಿದ ತಕ್ಷಣ ಅಲ್ಲಿಗೆ ಅಂಬುಲೆನ್ಸ್ ಚಾಲಕನನ್ನು ನೇಮಿಸಲಾಗುವುದು.

**–ಡಾ.ಲಿಂಗರಾಜ,**
ಡಿಎಚ್ಓ, ವಿಜಯನಗರ.



ಬೆಳ್ಳಗಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ಆಂಬುಲೆನ್ಸ್ ಗೆ ಚಾಲಕನ ನೇಮಕಾತಿಗೆ ಪ್ರತ್ಯೇಕ ಅನುದಾನ ಇಲ್ಲದಿರುವುದರಿಂದ, ಆಂಬುಲೆನ್ಸ್ ಗೆ ಚಾಲಕನ ಕೊರತೆ ಉಂಟಾಗಿರುವುದು ನನ್ನ ಗಮನಕ್ಕಿದೆ. ಈ ವಿಚಾರವಾಗಿ ಹಲವು ಬಾರಿ ಸರ್ಕಾರದ ಗಮನ ಸೆಳೆಯಲಾಗಿದ್ದು, ಮುಂದಿನ ದಿನಗಳಲ್ಲಿ ಪರ್ಯಾಯ ಪರಿಹಾರ ಕಂಡು ಕೊಳ್ಳಲು ಪ್ರಯತ್ನಿಸಲಾಗುವುದು.

**–ಡಾ. ಎನ್. ಟಿ. ಶ್ರೀನಿವಾಸ್**



ಬೆಳ್ಳಗಟ್ಟ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆಂಬುಲೆನ್ಸ್ ಗೆ ಚಾಲಕನ ನೇಮಕಾತಿಗೆ ಸಂಬಂಧ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು. ಆದಷ್ಟು ಬೇಗ ಚಾಲಕನ ನೇಮಕಾತಿಗೆ ಅನುಮೋದನೆ ದೊರೆಯುವ ವಿಶ್ವಾಸವಿದೆ.

**–ಡಾ. ಎಸ್. ಪಿ. ಪ್ರದೀಪ್**
ತಾಲ್ಲೂಕು ಆರೋಗ್ಯಾಧಿಕಾರಿ
ಕೂಡ್ಲಿಗಿ.

## ವಾಲ್ಮೀಕಿ ಪ್ರತಿಮೆ ಉದ್ಘಾಟನೆಯಾಗುವವರೆಗೆ ಹುಟ್ಟುಹಬ್ಬ ಆಚರಣೆ ಇಲ್ಲ: ಶಾಸಕ ನಾರಾ ಭರತ್ ರೆಡ್ಡಿ ಅನ್ನದಾನ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ಮುಂದೂಡುವಂತೆ ಮನವಿ

**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಕ್ಟೋಬರ್ 25ರಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸದಿರಲು ನಿರ್ಧರಿಸಿದ್ದು, ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಉದ್ಘಾಟನೆಯಾಗುವವರೆಗೆ ಹುಟ್ಟುಹಬ್ಬದ ಅಂಗವಾಗಿ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದಂತೆ ತಮ್ಮ ಮಿತ್ರರು ಹಾಗೂ ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ.



ಪ್ರತಿ ವರ್ಷ ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಸುಮಾರು 50 ಸಾವಿರದಿಂದ 60 ಸಾವಿರ ಜನರಿಗೆ ಅನ್ನದಾನ ಮಾಡುವ ಮೂಲಕ ಸಂತೋಷ ಹಂಚಿಕೊಳ್ಳಲಾಗುತ್ತಿತ್ತು. ಆದರೆ, ಈ ಬಾರಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆಯ ಉದ್ಘಾಟನೆ ಇನ್ನೂ ಬಾಕಿ ಇರುವುದರಿಂದ, ಪ್ರತಿಮೆ ಉದ್ಘಾಟನೆ ಯಾಗುವವರೆಗೆ ಅನ್ನದಾನ ಸೇರಿದಂತೆ ಹುಟ್ಟುಹಬ್ಬದ ಎಲ್ಲ ಆಚರಣೆಗಳನ್ನು ಮುಂದೂಡಲು ನಿರ್ಧರಿಸಿರುವುದಾಗಿ ತಿಳಿಸಿದ್ದಾರೆ.

ಮಹಾನ್ ಋಷಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಉದ್ಘಾಟನೆಯಾಗದಿರುವ ಸಂದರ್ಭದಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸುವುದು ಸೂಕ್ತವಲ್ಲ ಎಂಬ ಭಾವನೆ ತಮ್ಮದಾಗಿದೆ. ಹೀಗಾಗಿ, ಪ್ರತಿಮೆ ಉದ್ಘಾಟನೆಯಾಗುವವರೆಗೆ ಶುಭಾಶಯ ಕಾರ್ಯಕ್ರಮಗಳು, ಅನ್ನದಾನ ಹಾಗೂ ಇತರ ಯಾವುದೇ ಆಚರಣೆಗಳನ್ನು ಆಯೋಜಿಸದಂತೆ ಎಲ್ಲರಲ್ಲೂ ವಿನಂತಿಸಿದ್ದಾರೆ.

ಸಾರ್ವಜನಿಕ ಕಾರ್ಯಗಳಿಗೆ ಆದ್ಯತೆ ನೀಡುವುದು ತಮ್ಮ ಆಶಯವಾಗಿದ್ದು, ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಉದ್ಘಾಟನೆಯ ನಂತರ ಸೂಕ್ತ ಸಮಯದಲ್ಲಿ ಹುಟ್ಟುಹಬ್ಬದ ಅಂಗವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಉತ್ತಮವೆಂದು ಭಾವಿಸಿರುವುದಾಗಿ ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದ್ದಾರೆ.

ತಮ್ಮ ಈ ನಿರ್ಧಾರವನ್ನು ಮಿತ್ರರು, ಅಭಿಮಾನಿಗಳು ಹಾಗೂ ಕಾರ್ಯಕರ್ತರು ಅರ್ಥಮಾಡಿಕೊಂಡು ಗೌರವಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

### ಕುಡಿಯುವ ನೀರು, ಒಳಚರಂಡಿ ಸಮಸ್ಯೆಗೆ ಸ್ಪಂದಿಸದ ಪಾಲಿಕೆ

## ಮುಂಡ್ಲೂರು ಪ್ರಭಂಜನ್ ನೇತೃತ್ವದಲ್ಲಿ ಪ್ರತಿಭಟನೆ

**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯ 3ನೇ ವಾರ್ಡ್‌ನ ಬಂಡೀಮೋಟ್ ಪ್ರದೇಶದಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಾಗದಿರುವುದು ಹಾಗೂ ಒಳಚರಂಡಿ ಮತ್ತು ರಸ್ತೆ ಸ್ವಚ್ಛತೆ ಕಾರ್ಯಗಳು ಸಮರ್ಪಕವಾಗಿ ನಡೆಯದಿರುವುದನ್ನು ಖಂಡಿಸಿ ನಿವಾಸಿಗಳು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಪಾಲಿಕೆ ಸದಸ್ಯ ಮುಂಡ್ಲೂರು ಪ್ರಭಂಜನ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಬಂಡೀಮೋಟ್ ಪ್ರದೇಶದಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಾಗದ ಕಾರಣ ನಿವಾಸಿಗಳು ದೈನಂದಿನ ಅಗತ್ಯಗಳಿಗೆ ನೀರು ಪಡೆಯಲು ಪರದಾಡುವಂತಾಗಿದೆ. ಇದರೊಂದಿಗೆ ಒಳಚರಂಡಿಗಳ ಸ್ವಚ್ಛತೆ ಹಾಗೂ ರಸ್ತೆ ನಿರ್ವಹಣೆಯಲ್ಲಿಯೂ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಮೂಲಭೂತ ಸೌಲಭ್ಯಗಳ ಕೊರತೆಯಿಂದ ಸ್ಥಳೀಯರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಸದಸ್ಯ ಮುಂಡ್ಲೂರು ಪ್ರಭಂಜನ್, ವಾರ್ಡ್‌ನಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಒಳಚರಂಡಿ ಸ್ವಚ್ಛತೆ ಹಾಗೂ ರಸ್ತೆ ಸ್ವಚ್ಛತೆ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ನಿವಾಸಿಗಳು ಹಲವು ಬಾರಿ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕುಡಿಯುವ ನೀರು, ಸ್ವಚ್ಛತೆ ಹಾಗೂ ಒಳಚರಂಡಿ ನಿರ್ವಹಣೆಯಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಮಹಾನಗರ ಪಾಲಿಕೆಯ ಜವಾಬ್ದಾರಿಯಾಗಿದೆ. ಆದರೆ, ಬಂಡೀಮೋಟ್ ನಿವಾಸಿಗಳು ಅಗತ್ಯ ಸೌಲಭ್ಯಗಳಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಿಗಳು ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸದ ಕಾರಣ ಸಾರ್ವಜನಿಕರು ಪ್ರತಿಭಟನೆ ನಡೆಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬಂಡೀಮೋಟ್ ಪ್ರದೇಶಕ್ಕೆ ತಕ್ಷಣ ಕುಡಿಯುವ ನೀರು ಪೂರೈಕೆ ಪುನರಾರಂಭಿಸಬೇಕು. ಒಳಚರಂಡಿಗಳನ್ನು ಸ್ವಚ್ಛಗೊಳಿಸಿ, ರಸ್ತೆ ಸ್ವಚ್ಛತೆ ಹಾಗೂ ನಿರ್ವಹಣೆಗೆ ಆದ್ಯತೆ ನೀಡಬೇಕು. ವಾರ್ಡ್‌ನ ಮೂಲಭೂತ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿ ನಿವಾಸಿಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದರು.

ಜನರ ದೈನಂದಿನ ಬದುಕಿಗೆ ಅಗತ್ಯವಾದ ಕುಡಿಯುವ ನೀರು ಹಾಗೂ ಸ್ವಚ್ಛತೆಯಂತಹ ಮೂಲಭೂತ ಸೌಲಭ್ಯಗಳನ್ನಾದರೂ ಸಮರ್ಪಕವಾಗಿ ಒದಗಿಸಲು ಪಾಲಿಕೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬುದು ಬಂಡೀಮೋಟ್ ನಿವಾಸಿಗಳ ಆಗ್ರಹವಾಗಿದೆ.

## ಯಾದಗಿರಿಯಲ್ಲಿ ಚಿನ್ನದ ಪದಕ; ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಮೊರಾರ್ಜಿ ಶಾಲೆಯ ಕೃತಿಕಾ ಮನ್ನಂಗಿ

**ಹೊಸಪೇಟೆ ಧ್ವನಿ ನ್ಯೂಸ್ :**



**ಶಿಗ್ಗಾವಿ :** ಇತ್ತೀಚೆಗೆ ಯಾದಗಿರಿ ಜಿಲ್ಲೆಯಲ್ಲಿ ನಡೆದ ರಾಜ್ಯಮಟ್ಟದ ಟೆಕ್ವಾಂಡೋ ಸ್ಪರ್ಧೆಯಲ್ಲಿ ಸ್ಥಳೀಯ ಗಂಜಿಗಟ್ಟಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಕು. ಕೃತಿಕಾ ಮನ್ನಂಗಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಹಿಮಾಚಲ ಪ್ರದೇಶದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಆಕೆ ಭಾಗವಹಿಸಲಿದ್ದಾಳೆ.

ವಿದ್ಯಾರ್ಥಿನಿಯ ಸಾಧನೆಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಪ್ರಶಾಂತ ವರಗಪ್ಪನವರ, ಪ್ರಾಂಶುಪಾಲರಾದ ಶಂಭುಲಿಂಗಪ್ಪ ಹಿತ್ತಲಮನಿ, ದೈಹಿಕ ಶಿಕ್ಷಣ ಶಿಕ್ಷಕ ವಿರೇಶ ಮರಿಗೌಡರ ಮತ್ತು ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

## ಅ.14 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

**ವಿಜಯನಗರ (ಹೊಸಪೇಟೆ) :** ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಇದೇ ಅಕ್ಟೋಬರ್ 26 ರಂದು ರಾಜ್ಯಾಂದ್ಯಂತ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಕ್ಟೋಬರ್ 14 ರಂದು ಬೆಳಗ್ಗೆ 11.30 ಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಯಂತಿ ಅಂಗವಾಗಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ.

ಸಮಾಜದ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸರ್ವ ಜನಾಂಗದವರು ಸಭೆಗೆ ಭಾಗಿಯಾಗಿ ತಮ್ಮ ಸಲಹೆ ಸೂಚನೆ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

## ಜಿಲ್ಲಾ ಮಟ್ಟದ ಬಾಲಕಿಯರ ವಾಲಿಬಾಲ್ ನಲ್ಲಿ ಹರಪನಹಳ್ಳಿ ಜೈನ್ ಕಾಲೇಜಿಗೆ ದ್ವಿತೀಯ; ಮೂವರು ರಾಜ್ಯಮಟ್ಟಕ್ಕೆ ಆಯ್ಕೆ



**ಹೊಸಪೇಟೆ ಧ್ವನಿ ನ್ಯೂಸ್ :**

**ಹರಪನಹಳ್ಳಿ:** ಹೊಸಪೇಟೆಯಲ್ಲಿ ಜರುಗಿದ ಜಿಲ್ಲಾಮಟ್ಟದ ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್.ಎಸ್.ಹೆಚ್ ಜೈನ್ ಪಿಯು ಕಾಲೇಜಿನ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಕಾಲೇಜಿನ ವಿದ್ಯಾರ್ಥಿನಿಯರಾದ ಕೆ.ಸಂಧ್ಯಾ, ಸ್ನೇಹ ಕೆ, ಸಿಂಧೂ ಜೆ, ಆರತಿ ಕೆ, ಎಂ. ಹೇಮಲತಾ ಅವರು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು. ಅದರಲ್ಲಿ ಕೆ.ಸಂಧ್ಯಾ, ಸ್ನೇಹ ಕೆ ಹಾಗೂ ಸಿಂಧೂ ಜೆ ಅವರು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿನಿಯರನ್ನು ಪ್ರಾಂಶುಪಾಲರಾದ ಡಾ. ಶರತ್ ಎ.ಎಂ, ದೈಹಿಕ ಶಿಕ್ಷಕ ಹೆಚ್. ವಿನಾಯಕ, ಉಪನ್ಯಾಸಕರಾದ ವೀರೇಶ್ ಬಣಕಾರ್, ಲಿಂಗ ನಾಯ್ಕ್ ಸೇರಿದಂತೆ ಇತರರು ಅಭಿನಂದಿಸಿದರು. ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಪ್ರಾಂಶುಪಾಲರು ಮತ್ತು ಬೋಧಕ-ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿನಿಯರ ಸಾಧನೆಯನ್ನು ಶ್ಲಾಘಿಸಿದ್ದಾರೆ.

## ಜಿಲ್ಲಾ ಕಾರಾಗೃಹ ಬಂದಿಗಳಿಗೆ ಒಳಾಂಗಣ ಕ್ರೀಡಾಕೂಟ



**ಹೊಸಪೇಟೆ ಧ್ವನಿ ನ್ಯೂಸ್ :**

**ವಿಜಯನಗರ (ಹೊಸಪೇಟೆ) :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ದಸರಾ ಹಬ್ಬದ ಪ್ರಯುಕ್ತ ಹೊಸಪೇಟೆಯ ಜಿಲ್ಲಾ ಕಾರಾಗೃಹದಲ್ಲಿ ಬಂದಿಗಳ ಮನರಂಜನೆಗಾಗಿ ಇಂದು ಒಳಾಂಗಣ ಕ್ರೀಡಾಕೂಟ ಆಯೋಜಿಸಲಾಯಿತು.

ಕಾರಾಗೃಹ ಸುಧಾರಣಾ ಸೇವಾ ಇಲಾಖೆಯ ಮಹಾನಿರ್ದೇಶಕ ಅಲೋಕ್ ಕುಮಾರ್ ಹಾಗೂ ಜಿಲ್ಲಾ ಕಾರಾಗೃಹ ಅಧೀಕ್ಷಕ ಎಫ್.ಜಿ. ಬಾರಿಕೇರ್ ಅವರ ನಿರ್ದೇಶನದಂತೆ ನಡೆದ ಕ್ರೀಡಾಕೂಟದಲ್ಲಿ ಚೆಸ್, ಕೇರಂ ಹಾಗೂ ಮ್ಯೂಸಿಕಲ್ ಚೇರ್ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಶಿಕ್ಷಕರ ಸಂಘದ ಉಪಾಧ್ಯಕ್ಷೆ ವಿಜಯಕುಮಾರಿ ಸೇರಿದಂತೆ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು. ಕ್ರೀಡಾಕೂಟದಲ್ಲಿ ವಿಜೇತರಾದ ಬಂದಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಾಯಕ ಜೈಲರ್ ಎಸ್. ಎಸ್.ಲಚ್ಯಾಣ, ಕೆ.ರಿಯಾಜ್, ಸೈನಿಕ ಭೀಮೇಶ್ ಸೇರಿದಂತೆ ಕಾರಾಗೃಹದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

### ಚೆಕ್ ದುರುಪಯೋಗ, ಹಲ್ಲೆ-ಬೆದರಿಕೆ ಆರೋಪ: ಹಿಂದಿನ ಮ್ಯಾನೇಜರ್ ವಿರುದ್ಧ ಹಾಜಿ ಮಲಂಗ ದೂರು

## ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯ ಒದಗಿಸಲು ಆಗ್ರಹ

**ಬಳ್ಳಾರಿ :** ಸಂಸ್ಥೆಯ ಹಣಕಾಸಿನ ವ್ಯವಹಾರದಲ್ಲಿ ಲೆಕ್ಕಪತ್ರದ ವಿವಾದ, ಸಹಿ ಮಾಡಿದ ಚೆಕ್‌ಗಳ ದುರುಪಯೋಗ, ಗ್ರಾಹಕರ ಸರ್ವಿಸ್ ಮಾಹಿತಿಯ ಬಳಕೆ ಹಾಗೂ ಹಲ್ಲೆ-ಬೆದರಿಕೆ ಆರೋಪಗಳಿಗೆ ಸಂಬಂಧಿಸಿದಂತೆ ತವಕ್ಕಲ್-ಅಲ್ಲಾ ಎಂಟರ್‌ಪ್ರೈಸಸ್‌ನ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಹಾಜಿ ಮಲಂಗ ಅವರು ಹಿಂದಿನ ಮ್ಯಾನೇಜರ್ ವಿರುದ್ಧ ದೂರು ನೀಡಿದ್ದಾರೆ.

ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯ ಒದಗಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಾಜಿ ಮಲಂಗ, ತಮ್ಮ ಸಂಸ್ಥೆಯಲ್ಲಿ ಈ ಹಿಂದೆ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದ್ದ ಎಲ್.ಬಿ. ಅಬೂಬಕರ್ ಸಿದ್ದಿಕ ಸೇರಿದಂತೆ ಕೆಲವರ ವಿರುದ್ಧ ಆರೋಪಗಳನ್ನು ಮಾಡಿದರು.

ತಾವು ಎ.ಸಿ. ರಿಪೇರಿ ಮತ್ತು ಸರ್ವಿಸ್ ವ್ಯವಹಾರ ನಡೆಸುತ್ತಿದ್ದು, ಸಂಸ್ಥೆಯ ದೈನಂದಿನ ನಿರ್ವಹಣೆಯ ಜವಾಬ್ದಾರಿಯನ್ನು ಹಿಂದಿನ ಮ್ಯಾನೇಜರ್‌ಗೆ ವಹಿಸಲಾಗಿತ್ತು. 2023ರಿಂದ 2026ರವರೆಗೆ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳ ನಿಮಿತ್ತ ವಿವಿಧ ರಾಜ್ಯಗಳು ಮತ್ತು ವಿದೇಶಗಳಿಗೆ ತೆರಳುವ ಸಂದರ್ಭದಲ್ಲಿ ವ್ಯವಹಾರಗಳ ನಿರ್ವಹಣೆಗಾಗಿ ತಮ್ಮ ಸಹಿ ಇರುವ ಖಾಲಿ ಚೆಕ್‌ಗಳನ್ನು ನೀಡಿದ್ದೆ. ಆದರೆ, ಅವುಗಳ ದುರುಪಯೋಗವಾಗಿರುವ ಶಂಕೆ ಇದೆ ಎಂದು ತಿಳಿಸಿದರು.




ಸಂಸ್ಥೆಯ ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸುಮಾರು ರೂ.5 ಲಕ್ಷದ ಲೆಕ್ಕ ನೀಡುವಂತೆ ಕೇಳಿದಾಗ ಹಿಂದಿನ ಮ್ಯಾನೇಜರ್ ಸಂಪರ್ಕಕ್ಕೆ ಸಿಗಲಿಲ್ಲ. ಬಳಿಕ ಸಹಿ ಮಾಡಿದ ಚೆಕ್‌ಗಳು ಹಾಗೂ ಸಂಸ್ಥೆಯ ದ್ವಿಚಕ್ರವಾಹನವನ್ನು ಹಿಂದಿರುಗಿಸುವಂತೆ ಕೇಳಿದಾಗ, ಎಲ್.ಬಿ. ಅಬೂಬಕರ್ ಸಿದ್ದಿಕ ಸೇರಿದಂತೆ ಅಸೀನ್, ಶ್ರೀಕಾಂತ ಮತ್ತು ಅಬೂಸಾಲಿಯರು ?4 ಲಕ್ಷ ನೀಡುವಂತೆ ಒತ್ತಾಯಿಸಿ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿದರು.

ಒತ್ತಡದ ಹಿನ್ನೆಲೆಯಲ್ಲಿ ನಗದು ಹಾಗೂ ಫೋನ್‌ಪೇ ಮೂಲಕ ಹಣ ಪಾವತಿಸಿ, ತಮ್ಮ ಸಹಿ ಇರುವ ಎರಡು ಚೆಕ್‌ಗಳು ಮತ್ತು ದ್ವಿಚಕ್ರವಾಹನವನ್ನು ಮರಳಿ ಪಡೆದಿರುವುದಾಗಿ ಹೇಳಿದರು. ಈ ಘಟನೆಗೆ ಸಂಬಂಧಿಸಿದಂತೆ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 11ರಂದು ಗುನ್ನೆ ನಂ. 193/2026ರ ಅಡಿಯಲ್ಲಿ ದೂರು ದಾಖಲಿಸಿರುವುದಾಗಿ ತಿಳಿಸಿದರು.

ಗ್ರಾಹಕರ ಮಾಹಿತಿ ದುರುಪಯೋಗದ ಆರೋಪ

ತಮ್ಮ ಸಂಸ್ಥೆಯು ಗ್ರಾಹಕರೊಂದಿಗೆ ಒಂದು ವರ್ಷದ ಎ.ಸಿ. ಸರ್ವಿಸ್ ಒಪ್ಪಂದ ಮಾಡಿಕೊಂಡಿದ್ದು, ಪ್ರತಿ ಮೂರು ತಿಂಗಳಿಗೊಮ್ಮೆ ಸರ್ವಿಸ್ ನೀಡುವ ವ್ಯವಸ್ಥೆ ಇದೆ. ಆದರೆ, ಹಿಂದಿನ ಮ್ಯಾನೇಜರ್ ಸಂಸ್ಥೆಯ ಗ್ರಾಹಕರ ಸರ್ವಿಸ್ ಮಾಹಿತಿಯನ್ನು ಬಳಸಿಕೊಂಡು, 'ಎ.ಎಸ್. ಎಂಟರ್‌ಪ್ರೈಸಸ್' ಹೆಸರಿನಲ್ಲಿ ಗ್ರಾಹಕರಿಗೆ ವಿಸಿಟಿಂಗ್ ಕಾರ್ಡ್‌ಗಳನ್ನು ನೀಡಿ ಸರ್ವಿಸ್ ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲದೆ, ತಮ್ಮ ಸಂಸ್ಥೆಯ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಹಾಜಿ ಮಲಂಗ ಆರೋಪಿಸಿದರು.

ಇದರಿಂದ ಸಂಸ್ಥೆಯ ವ್ಯವಹಾರಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ಗ್ರಾಹಕರೊಂದಿಗಿನ ವಿಶ್ವಾಸಕ್ಕೂ ಧಕ್ಕೆಯಾಗಿದೆ. ಈ ಕುರಿತು ಪ್ರಶ್ನಿಸಿದಾಗ ಹಿಂದಿನ ಮ್ಯಾನೇಜರ್ ಹಾಗೂ ಅವರ ಸ್ನೇಹಿತರು ಮನೆಗೆ ಬಂದು, ತಮ್ಮ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಹಿಂಪಡೆಯುವಂತೆ ಒತ್ತಾಯಿಸಿದ್ದಾರೆ. ಅದಕ್ಕೆ ಒಪ್ಪದಿದ್ದಾಗ ಹಲ್ಲೆ ನಡೆಸಿದ್ದಾರೆ ಎಂದು ದೂರಿದರು. ಇದರಿಂದ ತಮಗೂ ತಮ್ಮ ಕುಟುಂಬಕ್ಕೂ ಸುರಕ್ಷತೆ-ಯ ಆತಂಕ ಎದುರಾಗಿದೆ ಎಂದು ತಿಳಿಸಿದರು.

ತಮ್ಮ ವಿರುದ್ಧವೂ ಪ್ರಕರಣ ದಾಖಲು: ಆರೋಪ

ಸೆಪ್ಟೆಂಬರ್ 22ರಂದು ಕೌಲ್ ಬಜಾರ್ ಪೊಲೀಸ್ ಠಾಣೆಯಿಂದ ತಮ್ಮ ಸಂಸ್ಥೆಯ ಸಿಬ್ಬಂದಿ ತೌಸೀಫ್‌ಗೆ ಕರೆ ಮಾಡಿ, ಎಲ್.ಬಿ. ಅಬೂಬಕರ್ ಸಿದ್ದಿಕ ಅವರ ಮೇಲಿನ ಹಲ್ಲೆ ಆರೋಪಕ್ಕೆ ಸಂಬಂಧಿಸಿದಂತೆ ಠಾಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಅದರಂತೆ ಹಾಜರಾದ ಸಿಬ್ಬಂದಿ, ದೂರಿನಲ್ಲಿ ಉಲ್ಲೇಖಿಸಿದ ದಿನಾಂಕ ಮತ್ತು ಸಮಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೊಲೀಸರಿಗೆ ಸಲ್ಲಿಸಿದ ಬಳಿಕ ಅವರನ್ನು ಕಳುಹಿಸಿಕೊಡಲಾಯಿತು ಎಂದು ಹೇಳಿದರು.

ನಂತರ ತಮ್ಮ ವಿರುದ್ಧ ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 22ರಂದು ಗುನ್ನೆ ನಂ. 185/2026ರ ಅಡಿಯಲ್ಲಿ ಪ್ರಕರಣ ದಾಖಲಾಗಿರುವುದು ತಿಳಿದುಬಂದಿದೆ. ಪೊಲೀಸರು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸದೆ ತಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂಬುದು ಹಾಜಿ ಮಲಂಗ ಅವರ ಆರೋಪವಾಗಿದೆ.

## ಉಜ್ಜಿನಿಯಲ್ಲಿ ಕಾಳಿಕಾದೇವಿ ಭವ್ಯ ಮೆರವಣಿಗೆ ಹಾಗೂ ಪುರಾಣ ಪ್ರವಚನಕ್ಕೆ ಚಾಲನೆ

**ಹೊಸಪೇಟೆ ಧ್ವನಿ ನ್ಯೂಸ್ :**



**ಕೊಟ್ಟೂರು :** ಉಜ್ಜಿನಿ ಗ್ರಾಮದಲ್ಲಿ ಶರನ್ನವರಾತ್ರಿ ದಸರಾ ಮಹೋತ್ಸವ ಹಾಗೂ ಕಾಳಿಕಾದೇವಿ ಪುರಾಣ ಪ್ರವಚನ ಕಾರ್ಯಕ್ರಮದ ನಿಮಿತ್ತ ಇಲ್ಲಿನ ಕಾಳಿಕಾ ದೇವಿ ದೇವಸ್ಥಾನ ಜೀರ್ಣೋದ್ಧಾರ ಮತ್ತು ಅಮರಶಿಲ್ಪಿ ಜಕಣಾಚಾರ್ಯ ಕುಶಲಕರ್ಮಿಗಳ ವಿಕಾಸ ಟ್ರಸ್ಟ್ ವತಿಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ 8 ಗಂಟೆಗೆ ಭಜರಂಗಾಚಾರ್ಯ ಅವರು ಧ್ವಜಾರೋಹಣ ನೆರವೇರಿಸುವ ಮೂಲಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ತದನಂತರ ಅಮ್ಮನವರ ಭವ್ಯ ಮೆರವಣಿಗೆಗೆ ಸಂಡೂರಿನ ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷರಾದ ಕುಮಾರಸ್ವಾಮಿ ಅವರು ಚಾಲನೆ ನೀಡಿದರು. ಪ್ರಮುಖ ಬೀದಿಗಳಲ್ಲಿ ಮಾನ್ಯರು ಹಾಗೂ ಭಕ್ತಾದಿಗಳ ಸಮ್ಮುಖದಲ್ಲಿ ಅಮ್ಮನವರ ಉತ್ಸವ ವೈಭವದಿಂದ ಜರುಗಿತು.

ಸಂಜೆ 7 ಗಂಟೆಗೆ 47ನೇ ವರ್ಷದ ಪುರಾಣ ಪ್ರವಚನ ಕಾರ್ಯಕ್ರಮವನ್ನು ಸ್ವಾಮಿ (ಶಿಕ್ಷಕರು) ಅವರು ಉದ್ಘಾಟಿಸಿದರು. ಕಾರ್ಯಕ್ರಮದ ಪ್ರವಚನಕಾರರಾಗಿ ಹೊಸಹಳ್ಳಿಯ ಶಿಕ್ಷಕರಾದ ಎಚ್.ಎಂ.ಬಿ. ಗುರುಮೂರ್ತಿ ಹಾಗೂ ಪಟ್ಟಣಕಾರರಾಗಿ ಉಜ್ಜಿನಿಯ ಪುರೋಹಿತ ಸಿದ್ದೇಶ್ವರ್ ಭಾಗವಹಿಸಿದ್ದರು. ಸಂಗೀತ ಸೇವೆಗೆ ಹಾರ್ಮೋನಿಯಂ ವಾದಕರಾಗಿ ಗದಗದ ಹನುಮಂತಪ್ಪ ಗವಾಯಿಗಳು ಹಾಗೂ ತಬಲಾ ವಾದಕರಾಗಿ ಕಲಘಟಗಿಯ ವಿನಾಯಕ ಆಚಾರ್ಯ ಸಹಕರಿಸಿದರು.

ಈ ಸಂದರ್ಭದಲ್ಲಿ ನಿರ್ವಹಣಾ ಸಮಿತಿಯ ಗೌರವಾಧ್ಯಕ್ಷರಾದ ರವೀಂದ್ರಚಾರ್, ಅಧ್ಯಕ್ಷರಾದ ಸಿದ್ದಲಿಂಗಚಾರ್ ಹಾಗೂ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಮತ್ತು ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

Hosapete Dhwani Kannada Daily Editor, Printer, Publisher & Owned By K. Prakash Kakubalu, 120, 1ST Ward, Kakubal Post Hospet, Ballary, Dist : Vijayanagara Karnataka State,
Printed at Dwaraka Printers & Publishers, Plot No. 12, Opp. Govt. Girls Hostel, GaneshaNagara Koppal-583231 Koppal District, Karnataka State,
e-mail : hosapetedhwani32026@gmail.com, Cell : 9342568684